# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:265 • ನೋಂದಣಿ ನಂ.:KARKAN27911 • ವಿಜಯನಗರ • 17.03.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:265 • Reg.No:KARKAN27911 • VIJAYANAGARA • 17.03.2024 • Sunday • Page:04 • Rs:2



MASSEY FERGUSON

RRR GROUP RUNNING HARD, DREAMING BIG



ರೈತರಿಗೆ ವಿಜಯಶ್ರೀ ಮೋಟಾರ್ಸ್‌ನಿಂದ
ಮಹಾಕೊಡುಗೆ
ರೈತನ ರಾಜ MF245 (Quadra PTO) ಆಲ್‌ರೌಂಡರ್ ಟ್ರ್ಯಾಕ್ಟರ್ ಖರೀದಿಸಿ,
ಟ್ರ್ಯಾಕ್ಟರ್‌ನೊಂದಿಗೆ 5ರ ಬಲರಾಮ ಮಡಕಿ ಉಚಿತವಾಗಿ ಪಡೆಯಿರಿ



ಉಚಿತ
TAFE
TP,
Registration,
Insurance,
LTT
10 ದಿನ ಮಾತ್ರ
* ಷರತ್ತುಗಳು ಅನ್ವಯಿಸುತ್ತವೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ: ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ), ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ–583239, ಮೊ: 9980127607,7353306719


## ಮೈಕ್ರೋ ನ್ಯೂಸ್

### ಚುನಾವಣಾ ಆ್ಯಪ್‌ಗಳ ಕುರಿತು ಜಾಗೃತಿ ಮೂಡಿಸಿ: ಪಿ.ಎಸ್.ವಸ್ತ್ರದ್

ಹಂಪಿ ಟೈಮ್ಸ್ ಬಳ್ಳಾರಿ
ಪಾರದರ್ಶಕ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣೆಯ ಮಾಹಿತಿ, ಸಹಾಯವಾಣಿ ಹಾಗೂ ಕುಂದುಕೊರತೆಗಳ ಬಗ್ಗೆ ಶಾಲೆ–ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ಚುನಾವಣಾ ಆ್ಯಪ್‌ಗಳಾದ ವಿ.ಹೆಚ್.ಎ, ಸಕ್ಷಮ್, ಸುವಿಧಾ, ಸಿ–ವಿಜಿಲ್ ಮತ್ತು 1950 ಸಹಾಯವಾಣಿ ಕುರಿತಂತೆ ಜಾಗೃತಿ ಮೂಡಿಸಬೇಕು ಎಂದು ಬೆಂಗಳೂರಿನ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿಯಾದ ಪಿ.ಎಸ್.ವಸ್ತ್ರದ್ ಅವರು ಸೂಚಿಸಿದರು.

ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಬಳ್ಳಾರಿ ನಗರದಲ್ಲಿ ಕಡಿಮೆ ಮತದಾನ ಕೇಂದ್ರಗಳ ಬಿ.ಎಲ್.ಓ ಮೇಲ್ವಿಚಾರಕರು, ಜಿಲ್ಲಾ ಮತ್ತು ತಾಲ್ಲೂಕು ಸ್ವೀಪ್ ತರಬೇತುದಾರರೊಂದಿಗೆ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಕಡಿಮೆ ಮತದಾನ ಕೇಂದ್ರಗಳಲ್ಲಿ ಚುನಾವಣಾ ಸಾಕ್ಷರತಾ ಕ್ಲಬ್ ಮತ್ತು ಮತದಾರರ ಜಾಗೃತಿ ನಮೂನೆಗಳ ಮೂಲಕ ವಿಶೇಷವಾದ ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು.

ಮತದಾನ ಕೇಂದ್ರಗಳಲ್ಲಿನ ಮೂಲ ಸೌಕರ್ಯಗಳ ಕುರಿತು ವಿಶೇಷ ಗಮನ ಹರಿಸಿ ಸಾರ್ವಜನಿಕರಿಗೆ, ವಿಶೇಷ ಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಬೇಕು ಎಂದರು.

2019 ರ ಲೋಕಸಭಾ ಚುನಾವಣೆಗಿಂತ ಶೇಕಡವಾರು ಮತದಾನ ಹೆಚ್ಚಿಸಲು ಹಲವಾರು ಸ್ವೀಪ್ ಚಟುವಟಿಕೆ ಕಾರ್ಯಕ್ರಮ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ವಹಿಸಲು ವಿಶೇಷ ಕಾಳಜಿ ವಹಿಸಬೇಕು ಎಂದರು.

ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು, ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಚುನಾವಣಾ ಜಾಗೃತಿ ಸ್ವೀಪ್ ಚಟುವಟಿಕೆಗಳು ಹಾಗೂ ಕಡಿಮೆ ಮತದಾನ ಕೇಂದ್ರಗಳಲ್ಲಿ ಶೇಕಡವಾರು ಮತದಾನ ಹೆಚ್ಚಿಸಲು ಕೈಗೊಂಡ ಕ್ರಮಗಳ ಕುರಿತು ಸಭೆಗೆ ವಿವರವಾದ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್, ಮಹಾನಗರ ಪಾಲಿಕೆಯ ಆಯುಕ್ತ ಜಿ.ಖಲೀಲ್‌ಸಾಬ್, ತಹಶೀಲ್ದಾರ ಗುರುರಾಜ, ತಾಪಂ ಇಒ ಮಡಗಿನ ಬಸಪ್ಪ ಸೇರಿದ 'ಂತೆ ಮತ್ತಿತರರು ಉಪಸ್ಥಿತರಿದ್ದರು.

# ಲೋಕ ಮಾದರಿ ನೀತಿಸಂಹಿತೆ ಜಾರಿ

## ಶಾಂತಿಯುತ, ಮತದಾನ ಹೆಚ್ಚಳಕ್ಕೆ ಕ್ರಮ : ಡಿಸಿ ದಿವಾಕರ

### 24 ಗಂಟೆಯೊಳಗೆ ಸರ್ಕಾರಿ, 48 ತಾಸಿನೊಳಗೆ ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳು ಹಾಗೂ 72 ತಾಸಿನೊಳಗೆ ಖಾಸಗಿ ವಲಯದಲ್ಲಿ ನೀತಿ ಸಂಹಿತೆಗೆ ವಿರುದ್ಧವಾದ ಜಾಹೀರಾತುಗಳನ್ನು ತೆಗೆಯಬೇಕು.

■ ಹಂಪಿ ಟೈಮ್ಸ್ ಹೊಸಪೇಟೆ
ಭಾರತ ಚುನಾವಣಾ ಆಯೋಗ 2024ರ ಸಾರ್ವತ್ರಿಕಾ ಲೋಕಸಭಾ ಚುನಾವಣೆಯ ದಿನಾಂಕ ಪ್ರಕಟಿಸಿದ್ದು, ಮೆ.7 ರಂದು ಚುನಾವಣೆ, ಜೂ.4 ರಂದು ಫಲಿತಾಂಶವಿದ್ದು, ಮಾ.16ರಿಂದ ನೀತಿಸಂಹಿತಿ ಜಾರಿಯಾಗಲಿದೆ. ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ವಿಜಯನಗರ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ, ವಿಜಯನಗರ, ಕೂಡ್ಲಿಗಿ ಹಾಗೂ ಹರಪನಹಳ್ಳಿ ಐದು ವಿಧಾನಸಭಾ ಕ್ಷೇತ್ರಗಳ ಬರಲಿದ್ದು, ಶಾಂತಿಯುತ ಹಾಗೂ ಮತದಾನ ಶೇಕಡವಾರು ಹೆಚ್ಚಳಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಲೋಕಸಭಾ ಚುನಾವಣೆಯನ್ನು ನ್ಯಾಯಸಮ್ಮತ, ನಿಷ್ಪಕ್ಷಪಾತವಾಗಿ, ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಲಾಗುವುದು. ಪ್ರತಿಯೊಬ್ಬ ಅರ್ಹ ಮತದಾರರು ತಮ್ಮ ಅಮೂಲ್ಯ ಮತದಾನದಿಂದ ಸುಭದ್ರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪಡೆಯಬೇಕು. ಚುನಾವಣೆ ಎಂಬುದು ಒಂದು ಅತ್ಯಂತ ಮಹತ್ವಪೂರ್ಣ ಪವಿತ್ರ ಕಾರ್ಯವಾಗಿದೆ.

**ಚುನಾವಣಾ ವೇಳಾಪಟ್ಟಿ:**
ಏ.12 ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಏ.19 ರಂದು ನಾಮಪತ್ರ ಸಲ್ಲಿಸಲು ಕೊನೆದಿನ. ಏ.20 ರಂದು ನಾಮಪತ್ರಗಳ ಪರಿಶೀಲನೆ, ಏ.22ರಂದು ಉಮೇದುವಾರಿಕೆ ಹಿಂತೆಗೆದುಕೊಳ್ಳುವ ಕೊನೆ ದಿನ. ಮೇ.7 ರಂದು ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ ಮತದಾನ, ಜೂ.4 ರಂದು ಮತ ಎಣಿಕೆ, ಜೂ.6ರಂದು ಚುನಾವಣೆ ಪ್ರಕ್ರಿಯೆ ಸಂಪೂರ್ಣ ಪೂರ್ಣಗೊಳ್ಳಲಿದೆ.

**ಮೀಸಲು ಕ್ಷೇತ್ರ:** ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ 5 ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ, 2 ಪರಿಶಿಷ್ಟ ಪಂಗಡ, 21 ಸಾಮಾನ್ಯ ಲೋಕಸಭಾ ಕ್ಷೇತ್ರಗಳಾಗಿವೆ.

> ಅನಧಿಕೃತ ಹಣ ಮತ್ತು ಬಿಲ್ ರಹಿತ ಸಾಮಗ್ರಿಗಳ ಸಾಗಣೆಗೆಗಳು ಕಂಡುಬಂದಲ್ಲಿ ಸಂಬಂದಿಸಿದ ಅಧಿಕಾರಿಗಳು ವಶಕ್ಕೆ ಪಡೆದು, ಪರಿಶೀಲನೆ ನಡೆಸಲಿದ್ದಾರೆ. 10 ಲಕ್ಷಕ್ಕೂ ಅಧಿಕ ಹಣದ ಸಾಗಾಣಿಕೆ ಇದ್ದಲ್ಲಿ ಆದಾಯ ತೆರಿಗೆ ಅಧಿಕಾರಿಗಳು, 10 ಲಕ್ಷಕ್ಕೂ ಒಳಗೆ ಹಣ ಸಾಗಿಸುತ್ತಿದ್ದೆ ಚುನಾವಣೆ ಅಧಿಕಾರಿಗಳು ಮತ್ತು ಇನ್ನುಳಿಗೆ ಅಬಕಾರಿ ಸೇರಿದಂತೆ ಸರ್ಕಾರ ಎಲ್ಲಾ ನೀತಿಗಳು ಈ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಜಾರಿಯಾಗಲಿವೆ
> – ಎಂ.ಎಸ್.ದಿವಾಕರ, ಡಿಸಿ, ಜಿಲ್ಲಾ ಚುನಾವಣಾಧಿಕಾರಿ, ವಿಜಯನಗರ



**ಜಿಲ್ಲಾ ಮತದಾರರು:**
ಬಳ್ಳಾರಿ ಲೋಕಸಭಾ ಕ್ಷೇತ್ರದ ವಿಜಯನಗರ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಗಳಲ್ಲಿ 265 ನಗರ, 869 ಗ್ರಾಮೀಣ ಸೇರಿ ಒಟ್ಟು 1234 ಮತದಾನ ಕೇಂದ್ರಗಳಿವೆ. 11,18,543 ಒಟ್ಟು ಮತದಾರರಿದ್ದಾರೆ. 5,57,385 ಪುರುಷ ಮತದಾರರದ್ದರೆ, 5,61,017 ಮಹಿಳಾ ಮತದಾರರಿದ್ದಾರೆ. 141 ತೃತೀಯ ಲಿಂಗಿಗಳು ಇದ್ದಾರೆ. 18–19 ವರ್ಷದ ಯುವ ಮತದಾರರ ಪೈಕಿ 15714 ಯುವಕರು, 13282 ಯುವತಿಯರು ಸೇರಿ ಒಟ್ಟು 28997 ಮತದಾರರಿದ್ದು, ಮೊದಲಬಾರಿಗೆ ಮತದಾನ ಮಾಡಲಿದ್ದಾರೆ.

**ಮನೆಯಲ್ಲೆ ಮತದಾನ:**
85 ವರ್ಷದ ಮೇಲ್ಪಟ್ಟ ಮತದಾರರಲ್ಲಿ 3064 ಪುರುಷರು, 5213 ಮಹಿಳೆಯರಿದ್ದಾರೆ ಸೇರಿ ಒಟ್ಟು 8277 ಮತದಾರರಿದ್ದಾರೆ. 15863 ವಿಕಲಚೇತನ ಮತದಾರರಿದ್ದಾರೆ. ಅಗತ್ಯವಿದ್ದಲ್ಲಿ ಮನೆಯಲ್ಲೆ ಮತದಾನಕ್ಕೆ ಅವಕಾಶವಿದೆ.

**ಮತಕೇಂದ್ರಗಳು:** ವಿಜಯನಗರ ಮತ್ತು ಕೂಡ್ಲಿಗಿ ಕ್ಷೇತ್ರದ ತಲಾ ಒಂದು ಪ್ರದೇಶವೊಂದರಲ್ಲೆ ತಲಾ 6 ಮತದಾನ ಕೇಂದ್ರಗಳಿವೆ. ಇನ್ನುಳಿದಂತೆ 5 ಮತಕೇಂದ್ರಗಳು 4 ಪ್ರದೇಶದಲ್ಲಿ, 4 ಮತ ಕೇಂದ್ರಗಳು 14 ಪ್ರದೇಶಗಳಲ್ಲಿ., 3 ಮತಕೇಂದ್ರಗಳಂತೆ 64 ಪ್ರದೇಶಗಳು, 2 ಮತಕೇಂದ್ರಗಳಂತೆ 196 ಪ್ರದೇಶಗಳು ಹಾಗೂ 561 ಪ್ರದೇಶಗಳಲ್ಲಿ ಒಂದೊಂದು ಮತಕೇಂದ್ರಗಳಿವೆ.

**ಚೆಕ್‌ಪೋಸ್ಟ್:**
ಬಳ್ಳಾರಿ ಲೋಕಸಭಾ ಕ್ಷೇತ್ರಗಳ ಒಟ್ಟು 4 ಮತ್ತು ದಾವಣಗೆರೆ ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಹರಪನಹಳ್ಳಿ ಒಂದು ಮತಕ್ಷೇತ್ರನ ಸೇರಿದಂತೆ ಒಟ್ಟು 14 ಚಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಪ್ರತಿ ಚಕ್‌ಪೋಸ್ಟ್‌ಗಳಲ್ಲಿ 3 ಎಸ್‌ಎಸ್‌ಟಿ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಪ್ರತಿ ಮತಕ್ಷೇತ್ರಕ್ಕೆ ಫ್ಲೈಯಿಂಗ್ ಸ್ಕವಾಡ್ ಟೀಮ್ಸ್ (ಎಫ್‌ಎಸ್‌ಟಿ) ಕೂಡ ರಚಿಸಲಾಗಿದ್ದು, ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಚುನಾವಣೆಯಲ್ಲಿ ಒಟ್ಟು 5874 ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದರು. ಎಸ್‌ಪಿ ಶ್ರೀಹರಿಬಾಬು ಬಿ.ಎಲ್. ಜಿಪಂ ಸಿಇಒ ಸದಾಶಿವಪ್ರಭು, ಎಡಿಸಿ ಜಿ.ಅನುರಾಧ ಇದ್ದರು.

### ಆಯುಧಗಳ ವಶ, 14 ರೌಡಿ ಶೀಟರ್ ಗಡಿಪಾರಿಗೆ ಪ್ರಸ್ತಾವನೆ: ಎಸ್ಪಿ

ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿಎಲ್ ಮಾತನಾಡಿ, ಚುನಾವಣೆ ಶಾಂತಿಯುತವಾಗಿ ನಡೆಯಲು ಅಗತ್ಯ ಕ್ರಮವಹಿಸಲಾಗಿದೆ 1200 ಪೊಲೀಸ್ ಸಿಬ್ಬಂದಿಗಳು ಚುನಾವಣೆ ಕರ್ತವ್ಯದಲ್ಲಿ ತೊಡಗಿದ್ದಾರೆ. ಮತದಾನದಂದು 1997 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಜಿಲ್ಲೆಯಲ್ಲಿ 682 ರೌಡಿ ಶೀಟರ್‌ಗಳ ಮೇಲೆ ಸೂಕ್ತ ಕ್ರಮವಹಿಸಲಾಗಿದೆ. ಜಿಲ್ಲೆಯಲ್ಲಿ 14 ಜನರನ್ನು ಗಡಿಪಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲೆಯಲ್ಲಿ 659 ಅಯುಧಗಳ ಲೈಸೆನ್ಸ್ ಹೊಂದಿದವರಿದ್ದು, ಈಗಾಗಲೆ ಬ್ಯಾಂಕ್ ಸೆಕ್ಯುರಿಟಿ, ಅಗತ್ಯ ಸೇವೆಗೆ ಹೊರತುಪಡಿಸಿ ಉಳಿದವುಗಳನ್ನು ವಶಕ್ಕೆ ಪಡೆಯಲಾಗಿದೆ. ಈಗಾಗಲೆ ಸಿಬ್ಬಂದಿಗೆ ಸಂಪೂರ್ಣ ತರಬೇತಿ ನೀಡಲಾಗಿದೆ. ನಗರ, ಪಟ್ಟಣಗಳಲಿ ಪಥಸಂಚಲನ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿ ನಿಯೋಜಿಸಲಾಗಿದ್ದು, ಅನಧಿಕೃತ ಹಾಗೂ ಆಧಾರರಹಿತ ವಸ್ತುಗಳನ್ನ ಪೂರೈಕೆ ಹಾಗೂ ಅನುಮಾನಾಸ್ಪದವಾಗಿ ಕಂಡ ಬಂದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗುವುದು. ಗಡಿ ಭಾಗಗಲ್ಲಿ ಸಿಸಿ ಕ್ಯಾಮರಗಳ ಮೂಲಕ ಹದ್ದಿನಕಣ್ಣಿಡಲಾಗಿದೆ ಪೊಲೀಸ್ ಇಲಾಖೆ ಸಂಪೂರ್ಣವಾಗಿ ಸನ್ನದ್ದವಾಗಿದ್ದು, ಯಾವುದೇ ತೊಂದರೆ ಕಂಡುಬಂದಲ್ಲಿ ಕೂಡಲೇ ಸಮೀಪ ಠಾಣೆಗೆ ದೂರು ನೀಡಬೇಕು ಎಂದರು.

### ಲೋಕಸಭಾ ಚುನಾವಣೆ ನೀತಿ ಸಂಹಿತೆ ಹೈಲೈಟ್ಸ್

- ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರವಾಸಿ ಮಂದಿರಗಳಲ್ಲಿ ರಾಜಕೀಯ ಚಟುವಟಿಕೆಗಳ ನಿಷೇಧ
- ಪ್ರವಾಸಿ ಮಂದಿಗಳ ಸ್ಥಳೀಯ ಆಡಳಿತ ವಶಕ್ಕೆ
- ಚುನಾಯಿತ ಹಾಗೂ ನಾಮನಿರ್ದೇಶಿತಗೊಂಡ ರಾಜಕೀಯ ಮುಖಂಡರಿಗೆ ನೀಡಲಾಗಿರುವ ಸರ್ಕಾರಿ ವಾಹನಗಳು ಜಿಲ್ಲಾಡಳಿತದ ವಶಕ್ಕೆ ಮತ್ತು ನಾಮನಿರ್ದೇಶಿತಗೊಂಡ ಅಧಿಕಾರೇತರ ಸದಸ್ಯರ ಚೇಂಬರ್‌ಗಳನ್ನು ಮುಚ್ಚಿ ಸೀಲ್ ಹಾಕುವುದು
- ಜಿಲ್ಲೆಯಾದ್ಯಂತ ವರ್ಗಾವಣೆ ನಿಷೇಧ
- ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ರಜೆ ನಿರ್ಬಂಧಿಸಲಾಗಿದೆ. ಜಿಲ್ಲಾಧಿಕಾರಿಗಳ ಪರವಾನಿಗೆ ಇಲ್ಲದೆ ಕೇಂದ್ರಸ್ಥಾನ ಬಿಡುಡತಿತಿವಂತಿಲ್ಲ.
- ಚುನಾವಣೆಗೆ ನಿಯೋಜನೆಗೊಂಡ ಅಧಿಕಾರಿಗಳು ಚುನಾವಣಾ ಕೆಲಸ ಹೊರತುಪಡಿಸಿ ಬೇರೆ ಕಾರ್ಯಕ್ಕೆ ಕೇಂದ್ರ ಸ್ಥಾನದಿಂದ ಹೊರಗೆ ತೆರಳುವಂತಿಲ್ಲ.
- ನಾಮನಿರ್ದೇಶನಗೊಂಡ ನಿಗಮ ಮಂಡಳಿಗಳು, ಸಮಿತಿಗಳನ್ನು ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಅಮಾನತ್ತಿನಲ್ಲಿಡಲಾಗಿದೆ.
- ಜಿಪಂ, ತಾಪಂ, ಗ್ರಾಪಂ ಹಾಗೂ ಇನ್ನಿತರೆ ಚುನಾಯಿತ ಸದಸ್ಯ ಮಂಡಳಿ ಸಾಮಾನ್ಯ ಸಭೆಗಳನ್ನು ಸಂಪೂರ್ಣ ಚುನಾವಣಾ ಪ್ರಕ್ರಿಯೆ ಮುಕ್ತಯವಾಗುವರೆಗೆ ನಿಷೇಧ
- ಜಿಲ್ಲೆಯಾದ್ಯಂತ ಮತದಾರರಿಗೆ ಪ್ರಭಾವಬೀರುವ ರಾಜಕೀಯ ಸಭೆ, ಸಮಾರಂಭಗಳ ನಿಷೇಧ. ಅಗತ್ಯವಿದ್ದಲ್ಲಿ ಚುನಾವಣಾಧಿಕಾರಿಗಳ ಪರವಾನಗಿ ಕಡ್ಡಾಯ.
- ನೀತಿ ಸಂಹಿತೆ ಕಟ್ಟುನಿಟ್ಟಾಗಿ ಪಾಲಿಸಲು ಮತದಾರರ ಪ್ರಭಾವಕ್ಕೊಳಪಡುವ ಎಲ್ಲಾ ಸರ್ಕಾರದ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರ, ಕಟೌಟ್ಸ್, ಹಾಗೂ ಬ್ಯಾನರ್ ತೆರವು.

# ಅರೆಪಡೆ ಸೈನಿಕರಿಗೆ ಆರತಿ ಬೆಳಗಿ ಸ್ವಾಗತ

## ಪಥ ಸಂಚಲನದಲ್ಲಿ ಹೆಜ್ಜೆ ಹಾಕಿದ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು

■ ಹಂಪಿ ಟೈಮ್ಸ್ ಕೊಟ್ಟೂರು
ಲೋಕಸಭಾ ಚುನಾವಣೆ ಹಿನ್ನೆಲೆ ಹಗರಿಬೊಮ್ಮನಹಳ್ಳಿ ಸಿಪಿಐ ವಿಕಾಸ್ ಲಮಾಣಿ ಮತ್ತು ಕೊಟ್ಟೂರು ಪಿಎಸ್‌ಐ ಗೀತಾಂಜಲಿ ಸಿಂಧೆ ನೇತೃತ್ವದಲ್ಲಿ ಅರೆಪಡೆ ಸೈನಿಕರೊಂದಿಗೆ ಶನಿವಾರ ಕೊಟ್ಟೂರು, ಕಾಳಾಪುರ ಮತ್ತು ಉಜ್ಜಯಿನಿ ಗ್ರಾಮದಲ್ಲಿ ನಡೆದ ಶಿಸ್ತಿನ ಪಥ ಸಂಚಲನವು ಜನರನ್ನು ಆಕರ್ಷಿಸಿತು.

ಪಥ ಸಂಚಲನವು ಪಟ್ಟಣದ ಹರಪನಹಳ್ಳಿ ರಸ್ತೆ ಪೊಲೀಸ್ ಠಾಣೆಯಿಂದ ಪ್ರಾರಂಭಗೊಂಡು ಬಸ್ ನಿಲ್ದಾಣ ಮೂಲಕ ರೇಣುಕಾ ಚಿತ್ರಮಂದಿ ರಸ್ತೆ ಮಾರ್ಗವಾಗಿ ಸಾಗಿ, ಉಜ್ಜಿನಿ ವೃತ್ತದಿಂದ ಮರುಳಿ, ಮಹಾತ್ಮ ಗಾಂಧೀಜಿ ಸರ್ಕಲ್ ಯಿಂದ ಪೊಲೀಸ್ ಠಾಣೆವರಗೆ ಮತ್ತು ತಾಲೂಕಿನ ಉಜ್ಜಿನಿ ಗ್ರಾಮದಲ್ಲಿ ಮುಖ್ಯ ರಸ್ತೆಗಳಲ್ಲಿ ನಡೆಸಿದರು,

ಸ್ಕೌಟ್ಸ್ ಅಂಡ್ ಗೈಡ್ಸ್" ಕೊಟ್ಟೂರು ವಿದ್ಯಾಭಾರತಿ ಶಾಲೆಯ ವಿದ್ಯಾರ್ಥಿಗಳು ಶಿಸ್ತಿನ ಬ್ಯಾಂಡ್ ಸೆಟ್‌ನೊಂದಿಗೆ ಸೈನಿಕರೊಟ್ಟಿಗೆ ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದರು.



ಕೊಟ್ಟೂರು ಪಟ್ಟಣದಲ್ಲಿ ಪಥ ಸಂಚಲನವು ಬಸ್ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆ ಮಹಿಳೆಯರು ಆರತಿ ಬೆಳಗಿ ಪುಷ್ಪಾರ್ಚನೆ ಮಾಡುವ ಮೂಲಕ ಸೈನಿಕರನ್ನು ಸ್ವಾಗತಿಸಿದರು. ಅರೆಪಡೆ ಸೈನಿಕರಿಗೆ ಹೂ ಮಾಲೇ ಹಾಕಿ ಗೌರವಿಸಿದರು. ಸಾರ್ವಜನಿಕರು ಸೈನಿಕರಿಗೆ ಸೆಲ್ಯೂಟ್ ಮೂಲಕ 'ಭಾರತ್ ಮಾತಾ ಕೀ ಜೈ' ಜೈ ಜವಾನ್ ಜೈ ಕಿಸಾನ್, ಜೈಕಾರ ಹಾಕಿ ಗೌರವ ವಂದನೆ ಸಲ್ಲಿಸಿದರು. ಪೊಲೀಸ್‌ರಾದ ಚಂದ್ರಮೌಳಿ, ಬಸವರಾಜ್, ಆರಾಧ್ಯ, ಶಶಿಧರ್, ವೀರೇಶ್ ಸೇರಿದಂತೆ ಅನೇಕ ಸಿಬ್ಬಂದಿ ವರ್ಗ ಹಾಗೂ ಶಾಲಾ ಶಿಕ್ಷಕರು ಕೂಡಾ ಪಥ ಸಂಕಲನದಲ್ಲಿ ಪಾಲ್ಗೊಂಡಿದ್ದರು.


ಬೇಕಾಗಿದ್ದಾರೆ
ಶಾನಭಾಗ ಟವರ್ಸ್‌ನಲ್ಲಿ ಹಾಜರಿ ಹೆಬ್ಬೆಟ್ಟು ಮಿಷನ್ ಹಾಕುವವರು ಬೇಕಾಗಿದ್ದಾರೆ.
ಮೂರರಿಂದ ನಾಲ್ಕು
Biometric Fingerprint
Time & Attendance Machine
ಮಷಿನ್ ಹಾಕಬೇಕಿದೆ. ಸರ್ವಿಸ್ ನೀಡಲಿಚ್ಚಿಸುವವರು ಸಂಪರ್ಕಿಸಿ.
ಶಾನಭಾಗ ಟವರ್ಸ್
ನ್ಯಾಷನಲ್ (ಪ್ರೈ) ಲಿಮಿಟೆಡ್
ಶಾನಭಾಗ ಸರ್ಕಲ್, ಹೊಸಪೇಟೆ–583201
9482147421
9449193615



|| ಶ್ರೀ ಸಿದ್ಧಿವಿನಾಯಕ ಪ್ರಸನ್ನ ||
ಕೇರಳ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ



9880956386
ವಿದ್ಯೆ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ–ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ–ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಚುನಾವಣಾ ಸಮಯದಲ್ಲಿ ಇಂಧನ ಬೆಲೆ ಇಳಿಕೆ ಅಬ್ಬರಿ

ಈಗೇನಿದ್ದರೂ ಲೋಕಸಭೆ ಚುನಾವಣಯದೇ ಚರ್ಚೆ, ಆರೋಪ ಮತ್ತು ಪ್ರತ್ಯಾರೋಪಗಳ ಸಮಯ. ಒಂದೊಂದು ಪಕ್ಷ ಒಂದೊಂದು ರೀತಿಯ ಆಮಿಷ, ಭರವಸೆ ಅಧಿಕಾರಕ್ಕೆ ಬಂದರೆ ಇಂಥ ಯೋಜನೆಗಳು ಬರಲಿವೆ ಎಂಬ ಮಾತುಗಳನ್ನು ಭರವಸೆಯನ್ನಾಗಿ ನೀಡುತ್ತಿವೆ. ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ ಎರಡು ರೂಪಾಯಿಗಳಷ್ಟು ಕಡಿಮೆ ಮಾಡಿದೆ. ಇದೂ ಒಂಥರಾ ಚುನಾವಣಾ ಗಿಮಿಕ್ ಅನ್ನದೇ ಬೇರೇನೂ ಅಲ್ಲ. ಅಷ್ಟೇ ಅಲ್ಲ ಅಡುಗೆ ಅನಿಲದ ದರವನ್ನೂ ಇತ್ತೀಚೆಗೆ ಕಡಿಮೆ ಮಾಡಲಾಗಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆಯಾಗಲಿದೆ, ಅದೂ ಚುನಾವಣಾ ಹೊಸ್ತಿಲಲ್ಲಿ ಎಂಬ ಮಾತುಗಳು ಈಗ ನಿಜವಾಗಿವೆ. ಈಗ ಲೋಕಸಭೆ ಚುನಾವಣೆ ಹಾಗೂ ಕೆಲ ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ಮುಖಂಡರು ಎಲ್ಲ ಆಯಾಮಗಳಲ್ಲಿ ರೆಡಿಯಾಗುತ್ತಿದ್ದಾರೆ. ಮೊದಲ ಹಂತವಾಗಿ ಜನರಿಗೆ ಸುಲಭವಾಗಿ ಆರ್ಥಿಕ ಉಳಿತಾಯವಾಗಬಲ್ಲ ಎಲ್‌ಪಿಜಿ ಸಿಲಿಂಡರ್ (ಅಡುಗೆ ಅನಿಲ) ಬೆಲೆಯನ್ನು 100 ರೂಪಾಯಿಗೆ ಇಳಿಸಿತ್ತು. ಆ ಮೂಲಕ ಮಧ್ಯಮ ಮತ್ತು ಬಡ ಕುಟುಂಬಗಳಿಗೆ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿದೆ. ಮತ್ತೆ ಯಾವಾಗ ಹೆಚ್ಚುತ್ತೆ ಎಂಬುದು ಬೇರೆ ಮಾತು. ಆದರೆ, ಸದ್ಯದ ಮಟ್ಟಿಗೆ ಕೋಟ್ಯಂತರ ಕುಟುಂಬಗಳಿವೆ ಇದು ಅನುಕೂಲವಾಗಿದೆ ಎಂಬುದು ಸತ್ಯ. ಲೋಕಸಭೆಯಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಇದು ಪ್ರಮುಖಾಂಶವೂ ಹೌದು. ಮೇಲಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ದರ ಇಳಿದಿರುವುದು ಸಹ ಪೆಟ್ರೋಲ್, ಡೀಸೆಲ್ ಬೆಲೆ ಇಳಿಯಲು ಕಾರಣ ಎನ್ನಲಾಗುತ್ತಿದೆ. ಇನ್ನು ಉಜ್ವಲ ಯೋಜನೆ ಅಡಿಯಲ್ಲಿ ಗ್ಯಾಸ್ ಸಿಲಿಂಡರ್‌ಗೆ ನೀಡುವ 300 ರೂಪಾಯಿ ಸಬ್ಸಿಡಿಯನ್ನು ಮತ್ತೊಂದು ಹಣಕಾಸಿನ ವರ್ಷದವರೆಗೆ ಮುಂದುವರಿಸಲು ಕೇಂದ್ರ ಸರ್ಕಾರ ತೀರ್ಮಾನ ಮಾಡಲಾಗಿದೆ. ದೇಶದ 10 ಕೋಟಿ ಕುಟುಂಬಗಳು ಈ ಸಬ್ಸಿಡಿಯ ಲಾಭ ಪಡೆಯಲಿವೆ. ಮತ್ತೊಂದೆಡೆ ಪ್ರತಿನಿತ್ಯ ಬೆಲೆಯೇರಿಕೆ ಆಗುತ್ತಿರುವ ಇಂದಿನ ದಿನಗಳಲ್ಲಿ ಇಂಥ ಕ್ರಮಗಳು ಬಡವರಿಗೆ ಮತ್ತು ಮದ್ಯಮ ವರ್ಗದವರಿಗೆ ಅನುಕೂಲವಾಗುತ್ತದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಅಡುಗೆ ಅನಿಲದಲ್ಲಿ ಬೆಲೆಯೇರಿಕೆ ಉಂಟಾದರೆ ಸಿಲಿಂಡರಿನಿಂದ ಸಿದ್ಧಪಡಿಸಿದ ಆಹಾರ ಖಾದ್ಯಗಳಲ್ಲೂ ಬೆಲೆಯಲ್ಲಿ ತೀವ್ರ ಹೆಚ್ಚಳವಾಗುತ್ತದೆ. ಸಾರಿಗೆಯ ವೆಚ್ಚಯೂ ಹೆಚ್ಚಾಗುವುದರಿಂದ ದೈನಂದಿನ ವಹಿವಾಟಿನಲ್ಲಿ ಪರಿಣಾಮ ಬೀರುತ್ತದೆ. ಹೆಚ್ಚಿದ ಬೆಲೆಗಳನ್ನು ಇಳಿಸಲು ಅಸಾಧ್ಯ ಎಂಬದೂ ಹೌದು. ಆದರೆ, ಮತ್ತಷ್ಟು ಬೆಲೆಯೇರಿಕೆಯನ್ನು ನಿಯಂತ್ರಿಸಬಹುದಾಗಿದೆ. ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಈ ಕ್ರಮಗಳು ಮಹತ್ವದ್ದು. ಎಂದಿನಂತೆ ವಿಪಕ್ಷಗಳು ಸಾಮಾನ್ಯವಾಗಿ ತೈಲ ಹಾಗೂ ಅನಿಲ ಬೆಲೆ ಏರಿಕೆಯನ್ನೇ ಸರ್ಕಾರದ ವಿರುದ್ಧದ ಪ್ರಹಾರ ಮಾಡುತ್ತವೆ. ಈಗ ಡೀಸೆಲ್, ಪೆಟ್ರೋಲ್ ಮತ್ತು ಅಡುಗೆ ಅನಿಲ ಬೆಲೆಯ ಕುಸಿತದಿಂದ ಅಥವಾ ಇಳಿಕೆಯಿಂದ ವಿಪಕ್ಷದವರಿಗೆ ಟೀಕೆ ಮಾಡಲು ಇದ್ದ ಪ್ರಮುಖ ಅಸ್ತ್ರ ಕಳೆದುಕೊಂಡಂತಾಗಿದೆ. ಜನಸಾಮಾನ್ಯರಿಗೆ ಮಾತ್ರ ಅನುಕೂಲವಾಗಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

ಸಂಪಾದಕರು:
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಅವಳೇಕೆ ಹೀಗೆ....?




ಈಗ ತಾನೆ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಿದ ನಾವು ಹೆಣ್ಣಿನ ಶಕ್ತಿ ಸಾಮರ್ಥ್ಯಗಳನ್ನು, ಅವಳ ದೌರ್ಬಲ್ಯ, ನ್ಯೂನತೆಗಳನ್ನು ಜೊತೆಗೆ ಹೆಣ್ಣು ಮಕ್ಕಳ ಕರ್ತವ್ಯ ಜವಾಬ್ದಾರಿಗಳ ಕುರಿತು ಸಿಗಬೇಕಾದ ಸ್ಥಾನ ಮಾನಗಳು ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಅವುಗಳಿಗೆಲ್ಲ ಸ್ಪಂದಿಸಬೇಕಾದ ರೀತಿ ನೀತಿಗಳ ಕುರಿತು ಅತ್ಯಂತ ಕಾಳಜಿ ಮತ್ತು ಕಳಕಳಿಯನ್ನು ಅನೇಕ ಸಭೆ ಸಮಾರಂಭಗಳಲ್ಲಿ ಗ್ರಾಮ, ರಾಜ್ಯ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾತನಾಡಿ ಪುನಃ ಅಂತಹ ಜವಾಬ್ದಾರಿಯುತ ನಡಾವಳಿಗಳನ್ನು ಮಂಡಿಸಿ ಅವುಗಳನ್ನೆಲ್ಲ ಕಾರ್ಯರೂಪಕ್ಕೆ ತರುವ ನಿರ್ಣಯಗಳನ್ನು ತೆಗೆದುಕೊಂಡು ಅತ್ಯಂತ ಅರ್ಥಪೂರ್ಣವಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಿದ್ದು ತುಂಬಾ ಪ್ರಶಂಸನೀಯ ಮತ್ತು ಕರ್ತವ್ಯ ಕೂಡ.

ಆದರೆ ಆಚರಣೆಯ ಮರುದಿನವೇ ಮತ್ತೆ ಅದೆ ಸುದ್ದಿಗಳು ಮಹಿಳೆಯ ಕೊಲೆ, ಮಕ್ಕಳ ಮೇಲೆ ಶೋಷಣೆ, ವೃದ್ದ ತಾಯಿಯನ್ನು ನಡು ರಸ್ತೆಯಲ್ಲಿ ಬಿಟ್ಟು ಹೋದ ಅನಾಗರಿಕ ಘಟನೆ, ಹಲವಾರು ವರ್ಷಗಳಿಂದ ಟಾಯ್ಲೆಟ್ ರೂಮಿನಲ್ಲಿ ತಾಯಿಯನ್ನು ಕೂಡಿಹಾಕಿದ ವಿದ್ಯಾವಂತ ಮಕ್ಕಳು ಎನ್ನುವ ಘಟನೆಗಳ ಸಚಿತ್ರ ಸುದ್ದಿಗಳನ್ನು ನೋಡಿದಾಗ ಕರುಳು ಕಿತ್ತಹಾಗೆ ಎನ್ನುವುದಿಲ್ಲವೆ? ಪ್ರತೀ ವರ್ಷ ರಾಜ್ಯ ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ನಾವು ಕೈಗೊಂಡ ತೀರ್ಮಾನಕ್ಕೆ ನಾವು ತೋರುವ ಬದ್ದತೆ ಇಷ್ಟೇನ? ಎನ್ನುವ ಅಳುಕು ಕಾಡುತ್ತದೆ ಅಲ್ಲವೇ? ಹಾಗಾದರೆ ನಾವೆಲ್ಲರೂ ಎಲ್ಲಿ ಎಡುಹುತಿದ್ದೇವೆ ಎಂದು ನೋಡುವುದಾದರೆ ನಮಗೆ ಸ್ಪಷ್ಟವಾಗಿ ಗೋಚರಿಸುವುದು ನಾವು ಮೂಲದಲ್ಲಿ ಎಡಹುತಿದ್ದೇವೆ ಎಂದು.

ಮಹಿಳೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನಮ್ಮಿಂದ ಸಾಧ್ಯವಾಗಿಲ್ಲ ಎನ್ನುವುದು ಸ್ಪಷ್ಟ. ಸಹಜ, ಸಂವೇದನೆ ಮತ್ತು ರಿಸರ್ವ್ಡ್ ಎನ್ನುವುದು ಒಂದು ಕಡೆಯಾದರೆ. ಅವಳೆ...? ಅವಳು ಒಂತಾರ ಬಿಡು, ಅಯ್ಯೋ ಅವಳು ಇರೋದೆ ಹಾಗೆ ಒಂತರಾ ಮೂಡಿ, ಅವಳು ಪಾಡಿಗೆ ಅವಳನ್ನು ಬಿಡಿ ತಾನೆ ಸರಿಹೊಗ್ತಾಳೆ ಎನ್ನುವ ಮಾತಾನ್ನು ಬಹುಪಾಲು ಮನ ಮನೆಗಳಲ್ಲಿ ಕೇಳಿರುತ್ತೇವೆ, ನೋಡಿಯೂ ಇರುತ್ತೇವೆ ಅಲ್ವೆ? ಇಲ್ಲೆ ಈ ಹಂತದಲ್ಲೇ ನಾವು ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದೇವೆ, ಇದು ನಮ್ಮ ಸಮಾಜ ಮಹಿಳೆ ಎಂದರೆ ಹೀಗೆ, ಅವಳಿರುವುದು ಹಾಗೆ, ಎನ್ನುವ ಅಲ್ಪ ಜ್ಞಾನ ವಾಗಿರಬಹುದು ಅಥವಾ ಉದಾಸೀನ ಮನೋಭಾವ ಇಲ್ಲವೇ ಉದ್ದೇಶಪೂರ್ವಕವಾಗಿ ಅವಳ ಕಡೆಗೆ ಒಂದು ನಿರ್ಲಕ್ಷ ಎಂದರೂ ತಪ್ಪಾಗಲಾರದು.

ಏಕೆಂದರೆ ಇಲ್ಲಿ ಅವಳು ಕೇವಲ ಹೆಣ್ಣಲ್ಲ. ಅವಳು ಅವಳಾಗಿಯೇ ಇರುವುದರ ಜೊತೆ ಜೊತೆಗೆ ಅವನ ಅಮ್ಮನಾಗಬೇಕು, ಅವನ ಅರ್ಧಾಂಗಿಯಾಗಬೇಕು, ಅವಳು ಅವಳ ಮತ್ತು ಅವನ ಮಕ್ಕಳ ಅಮ್ಮನಾಗಬೇಕು, ಅಕ್ಕನಾಗಿ, ತಂಗಿಯಾಗಿ, ಸಹಪಾಠಿಯಾಗಿ, ಸ್ನೇಹಿತಳಾಗಿ ಒಲವಿನ ಸಖಿಯಾಗಬೇಕಲ್ಲವೆ? ಇವೆಲ್ಲವುಗಳನ್ನು ಅವುಗಳದ್ದೆ ಆದ ರೀತಿಯಲ್ಲಿ ನಿಭಾಯಿಸಬೇಕಲ್ಲವೆ? ಅಲ್ಲೆ ಅಲ್ಲಿಯೇ ಅವಳು ಅವಳಾಗಿ ಉಳಿಯಲು ಹೆಣಗುತ್ತಾಳೆ, ನೋಯಿತ್ತಾಳೆ ಹಲವು ಬಾರಿ ನಲುಗುತ್ತಾಳೆ ಮತ್ತು ನರಳುತ್ತಾಳೆ. ಕಾರಣ ತನಗನಿಸಿದ್ದನ್ನು ನೇರವಾಗಿ ಹೇಳಿಲಾರದೆ ಎಲ್ಲಿ ತಾನು ಹೇಳಿದ್ದನ್ನು ತನ್ನ ಅನಿಸಿಕೆ, ಅರಿಕೆ, ಬಯಕೆಯು ಒಂದು ವೇಳೆ ತಿರಸ್ಕೃರವಾದರೆ ಎಂಬ ಸಂದೇಹ ಮತ್ತು ಸಂಕೋಚ ಅವಳನ್ನು ಪ್ರತೀ ಹಂತದಲ್ಲೂ ತಡೆಯುತ್ತಿರುತ್ತದೆ.

ಆದ್ದರಿಂದಲೇ ಅವಳು ನಾಳೆಯ ಮರೆಹೋಗುತ್ತಾಳೆ, ಇಂದಿನ ನೋವು ಮತ್ತು ನಲಿವು ಎರಡರಿಂದಲೂ ವಂಚಿತಳಾಗುತ್ತಾಳೆ.

ಈ ರೀತಿಯ ಅವಳು ಮಾಡಿಕೊಳ್ಳುವ ಅನಿವಾರ್ಯ, ಅಸಹಜ ಮತ್ತು ಅವಳ ಸಹಜತೆಯಿಂದ ತಪ್ಪಿಹೋಗುವ ಸಂದರ್ಭಗಳಿಗೆ ಅವಳು ಪದೇ ಪದೇ ತೆಗೆದುಕೊಳ್ಳುವುದರಿಂದ ಅವಳು ಉಳಿದವರ ದೃಷ್ಟಿಕೋನದಲ್ಲಿ ನಗಣ್ಯ ವಾಗುತ್ತಾಳೆ ಮತ್ತು ಅವಳು ಅಷ್ಟೇ ಬಿಡಿ ಎನ್ನುವ ಅಭಿಪ್ರಾಯಕ್ಕೆ ಪಕ್ಕಾಗುತ್ತಾಳೆ. ಸಹಜವೋ ಎಂಬಂತೆ ಅದನ್ನು ಅವಳೂ ಒಪ್ಪಿಕೊಂಡು ಮುಂದುವರಿದು ಬಿಡುತ್ತಾಳೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಈ ಹಂತದಲ್ಲಿ ಅವಳ ಜೊತೆ ಒಡನಾಡುವ, ಅವಳ ಕುಟುಂಬದ ಸುತ್ತಲಿನ ಸಮಾಜದಲ್ಲಿನ ಪ್ರತಿಯೊಬ್ಬರೂ ಕೊಂಚ ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಅವಳನ್ನು ಅವಳಾಗಿಯೇ ಒಪ್ಪಿಕೊಳ್ಳಬೇಕಾಗುತ್ತದೆ.

ಅವಳನ್ನು ಅವಳನ್ನಾಗಿ ಒಪ್ಪಿಕೊಳ್ಳಲು ಹಲವಾರು ದಾರಿಗಳು.

1. ಅವಳ ಮಾತಿನ ನೇರ ಅರ್ಥಕ್ಕಿಂತ ಅದರ ಹಿಂದಿನ ಉದ್ದೇಶ ಅರಿತುಕೊಳ್ಳುವ ಪ್ರಯತ್ನ ಮಾಡಿ.

ಉದಾ: ನನಗೆ ಹಸಿವಿಲ್ಲ ಎಂದರೆ, ಮೊದಲು ನೀನು ಊಟ ಮಾಡು ಎಂದಾಗಬಹುದಲ್ಲವೆ, ಅಥವಾ ಇಬ್ಬರೂ ಉಣ್ಣುವಷ್ಟು ಇಲ್ಲ ಎಂದಿರಬಹುದಲ್ಲವೆ. ಇಲ್ಲವೇ ಮಾರಾಯ ಒಮ್ಮೆ ಒಳಗೆ ಬಂದು ನೋಡು ಎನ್ನುವ ಸೂಕ್ಷ್ಮ ಇರಬಹುದಲ್ಲವೆ.

2. ಅವಳು ಎಷ್ಟೇ ಬುದ್ದಿವಂತಳಾಗಿದ್ದರೂ ನೀ ತೋರಿಸುವ ಕಾಳಜಿಗೆ ಸೋಲುತ್ತಾಳೆ.

ಇದು ಅವಳ ನ್ಯೂನತೆ ಅಲ್ಲ ಅವಳ ಸಹಜತೆ, ಪ್ರಕೃತಿ ನೀಡಿದ ವರ ಎಂದರೂ ಸರಿಯೇ. ಪ್ರೀತಿ, ಪ್ರೇಮ ಮತ್ತು ಕಾಳಜಿಗೆ ಅವಳು ಯಾವತ್ತೂ ಸೋಲುತ್ತಾಳೆ. ನಿಮ್ಮ ಒಂದೇ ಒಂದು ಪ್ರೀತಿಯ ನುಡಿ ಸಾಕು ಅವಳ ಸಾಂತ್ವನಕ್ಕೆ.

3. ಒಂದು ಮಾತಿದೆ "ಹೆಣ್ಣು ಮಕ್ಕಳಿಗೆ ಅವರ ಮುಂದೆಯೇ, ಗಂಡಸರಿಗೆ ಅವರ ಹಿಂದೆ ಹೊಗಳಬೇಕಂತೆ" ಇದರ ಅರ್ಥ ಇಷ್ಟೇ ನಿಮ್ಮ ಒಂದು ಮೆಚ್ಚುಗೆಯ ಮಾತು, ಅವಳನ್ನು ಒಪ್ಪಿಕೊಳ್ಳುವ ಮನಸ್ಸು ಒಂದು ಮೆಚ್ಚುಗೆ, ಅವಳಲ್ಲಿ ಅಗಾಧವಾದ ಪ್ರಮಾಣದಲ್ಲಿನ ಬದಲಾವಣೆಗೆ ಕಾರಣವಾಗುತ್ತದೆ.

4. ಅವಳು ಎಂದಿಗೂ ಒಂಟಿಯಾಗಿರಲು ಒಪ್ಪುವುದಿಲ್ಲ.

ಒಂದು ಹಂತಕ್ಕೆ ಇದು ವಿಪರೀತ ಎನಿಸಿದರೂ ಇದೇ ಸತ್ಯ,, ಬೇಕಿದ್ದರೆ ನೀವು ಗಮನಿಸಿ ಅವಳು ಯಾವತ್ತೂ ಜನರ ಮಧ್ಯದಲ್ಲಿ ಇರುತ್ತಾಳೆ.

ಉದಾ: ಮಗುವಿನ ಜೊತೆ ಬಿಡಿಸದ ಬಂದ ಅಮ್ಮಾ, ತಂಗಿಯು ಯಾವತ್ತೂ ಅಣ್ಣನ ಬೆಂಗಾವಲಿನಲ್ಲಿ, ಸ್ನೇಹಿತರ ಜೊತೆ, ಗಂಡನ ಜೊತೆ, ಕುಟುಂಬದ ಜೊತೆ

ಹೀಗೆ ಅವಳು ಯಾವತ್ತೂ ಸಂಘ ಜೀವಿ. ಒಂದು ವೇಳೆ ಅವಳು ಏಕಾಂಗಿತನವನ್ನು ಬಯಸುತಿದ್ದಾಳೆ ಎಂದರೆ ಖಂಡಿತವಾಗಿ ಏನೋ ದಾರಿ ತಪ್ಪಿದೆ ಎಂದೇ ಅರ್ಥ! ಹಾಗಾಗಿ ಅವಳ ಸಾಂಗತ್ಯವನ್ನು ಪುರಸ್ಕರಿಸಿ ಅದು ಅವಳಿಗೆ ಆನಂದವನ್ನು ಕೊಡುತ್ತದೆ.

5. ಸದಾ ಭದ್ರತೆಯ ಭಾವನೆಯನ್ನು ಅನುಭವಿಸುವ ಹಂಬಲ ಅವಳದು.

ಅಪ್ಪನಾಗಿ, ಅಣ್ಣನಾಗಿ, ಸ್ನೇಹಿತನಾಗಿ, ಗಂಡನಾಗಿ ಸದಾ ಒಂದಿಲ್ಲೊಂದು ಜೀವದ ಜೊತೆಯನ್ನು ಹೊಂದಲು ಅವಳು ಬಯಸುತ್ತಾಳೆ. ನಡೆಯುವಾಗ, ನುಡಿಯುವಾಗ, ದುಡಿಯುವಾಗ, ಕಷ್ಟದಲ್ಲಿ, ಸಂತೋಷದಲ್ಲಿ ಒಂದು ಭದ್ರತೆಯ ಭಾವನೆಗೆ ಪಕ್ಕಾಗಿರಲು ಹಂಬಲಿಸುತ್ತಾಳೆ. ಆ ಭದ್ರತೆಯನ್ನು ಖಾತ್ರಿಪಡಿಸಬೇಕು ಅಷ್ಟೇ.

6. ಅವಮಾನವನ್ನು ಸಹಿಸಿಕೊಳ್ಳುವುದಿಲ್ಲ ಹಾಗೆ ಅಸಹ್ಯವನ್ನು ಒಪ್ಪಿಕೊಳ್ಳುವುದಿಲ್ಲ.

ಸಾರ್ವಜನಿಕ ಅವಮಾನ ಮತ್ತು ಮಾನಹಾನಿಯನ್ನು ಅವಳು ಎಂದಿಗೂ ಸಹಿಸುವುದಿಲ್ಲ. ಒಂದು ವೇಳೆ ನಿಮ್ಮಿಂದ ತಪ್ಪಾಗಿದ್ದರೆ ಒಪ್ಪಿಕೊಳ್ಳಿ. ಅವಳಿಂದಾದ ತಪ್ಪನ್ನೂ ಮನ್ನಿಸಿ ಬಿಡಿ. ಅವಳ ಮನಸ್ಸು ಸೂಕ್ಷ್ಮ ಕ್ಷಮಿಸಿಬಿಡಿ, ಹೀಯಾಳಿಕೆಯ ಮಾತುಗಳು ಬೇಡ

7. ಅವಳ ಅಸ್ತಿತ್ವವೇ ಅವಳ ಮಾತು!

ಹೆಣ್ಣು ಮೌನಿ ಎಂದವರಾರು? ದಿನವೊಂದಕ್ಕೆ ಸುಮಾರು 6000 ಸಾವಿರ ಶಬ್ದ ಗಳನ್ನು ಒಬ್ಬ ಹೆಂಗಸು ಮಾತನಾಡುತ್ತಾಳೆ ಎನ್ನುತ್ತದೆ ವರದಿ. ಮಾತೇ ಅವಳ ಅಭಿವ್ಯಕ್ತಿಯ ರಹದಾರಿ. ಅವಳಿಗೆ ನೋವಾಗಿದ್ದಲ್ಲಿ, ನಲಿವಿನಲ್ಲಿ, ಸಾಂತ್ವನದಲ್ಲಿ, ಕೋಪದಲ್ಲಿ ಮಾತೆ ಅವಳ ಸಂಗಾತಿ. ಏಕೆಂದರೆ ಮಹಿಳೆ ತನ್ನ ನೋವನ್ನು ಹೊರಹಾಕುವ ಏಕೈಕ ದಾರಿ ಎಂದರೆ ಮಾತು, ಇಲ್ಲವೇ ಅಳುವುದು. ಅವುಗಳು ಯಥಾವತ್ತಾಗಿ ಪ್ರಕಟಗೊಳ್ಳಲಿ ಬಿಟ್ಟುಬಿಡಿ,

8. ಒಲಿದ ಜೀವ ಜೊತೆಯಲಿರಲು ಬಾಳೂ ಸುಂದರ.

ಅವಳನ್ನು ಒಪ್ಪಿಸಿ ಒಂದಾದ ಒಲವು ಶಾಶ್ವತ, ಅದಕ್ಕೆ ಪೂರಕ ಸಮಯ ನೀಡಿ. ಅವಳು ಅವಳಾಗಿಯೇ ಒಲಿದು ಬರುವುದನ್ನು ಕಾಯಿರಿ. ಬಲವಂತದ ಒಲುಮೆ ಸಲ್ಲ.

9. ಅವಳ ಮೌನ ಸಾವಿರ ಮಾತಿಗೆ ಸಮಾನ.

ಮೊದಲು ಅವಳ ಮಾತಿಗೆ ನೀವು ಕಿವಿಯಾಗಿ, ಅವಳಿಗಾಗಿ ಸಮಯ ಕೊಡಿ, ಅವಳೊಂದಿಗೆ ಒಡನಾಡಿ, ಒಡಗೂಡಿ.

10. ಅವಳ ವೈಯಕ್ತಿಕಕ್ಕೂ ಬೆಲೆ ಕೊಡಿ.

ಅವಳ ಆಸೆ, ಅಭಿಪ್ರಾಯ, ಬಂದು ಬಳಗ, ಸ್ನೇಹಿತರು, ಆಸಕ್ತಿ, ಹವ್ಯಾಸಗಳನ್ನು ಗೌರವಿಸಿ. ಅವಳ ಅಗತ್ಯತೆ ಅನಿವಾರ್ಯತೆಗಳನ್ನು ಒಪ್ಪಿಕೊಳ್ಳಿ.ಅವಳದೇ ಆದ ಗುಟ್ಟನ್ನು, ಗೌಪ್ಯತೆ ಯನ್ನು, ಆತ್ಮ ಗೌರವವನ್ನು ಕೆಣಕಬೇಡಿ, ಬದಲಿಗೆ ಗೌರವಿಸಿ.

ಹೌದು ಇಷ್ಟೆಲ್ಲಾ ತಿಳುವಳಿಕೆಯ ಅವಶ್ಯಕತೆ ಇದೆಯಾ? ಎಂದರೆ ಖಂಡಿತವಾಗಿ ಇದೆ. ಏಕೆಂದರೆ ಹೆಣ್ಣು ಪ್ರಕೃತಿಯ ಸಕಾರ ಮೂರ್ತಿ, ಸಹಜತೆಯ ಪ್ರತೀಕ, ಬದುಕಿನ ಬರವಸೆ. ಇವೆಲ್ಲವುಗಳ ಜೊತೆ ಅವಳೂ ನಮ್ಮಂತೆಯೇ ಆದರೆ ವೈವಿಧ್ಯಮಯ ವ್ಯಕ್ತಿತ್ವ ಅವಳದು. ಮಾನಸಿಕವಾಗಿ ಮತ್ತು ದೈಹಿಕವಾಗಿ ವಿಭಿನ್ನ ಸಾಮರ್ಥ್ಯ ಹೊಂದಿದಾಕೆ ಅವಳು.ಅವಳಲ್ಲಿನ ಮನೋಮಂಡಲದ ವಿಚಾರದಾರೆಗಳು, ಅವಳು ಒಳಗೊಳ್ಳುವ ಪರಿಸರ, ಅವಳ ಬೌದ್ಧಿಕ ಮತ್ತು ಭೌತಿಕ ಸಂರಚನೆ, ಹಾರ್ಮೋನ್ ಗಳ ಬದಲಾವಣೆ ಗಳು ಹೆಣ್ಣಿನ ಸ್ವಾಭಾವಿಕ ಗುಣಗಳಲ್ಲಿನ ವ್ಯತ್ಯಾಸಕ್ಕೆ ಕಾರಣವಾಗುತ್ತವೆ. ಹಾಗೆಯೇ ಎಲ್ಲರೂ ಇದೆ ರೀತಿ ಎಂದಾಗಲು ಸಾಧ್ಯವಿಲ್ಲ. ಇಷ್ಟಾದ ಮೇಲು ಅವಳೇಕೆ ಹೀಗೆ.....? ಎಂದರೆ.

# ವರದಿಯ ಶಿಫಾರಸು ಪರಿಶೀಲಿಸಿ, ಸೂಕ್ತ ತೀರ್ಮಾನ

## ಸಿಎಂ ಸಿದ್ದರಾಮಯ್ಯ ಸೂಚನೆ । ಏಳನೇ ವೇತನ ಆಯೋಗ ವರದಿ ಸಲ್ಲಿಕೆ । ಶೇ. 27.5 ರಷ್ಟು ಹೆಚ್ಚಳಕ್ಕೆ ಶಿಫಾರಸು

**ಬೆಂಗಳೂರು:** ರಾಜ್ಯದ 7ನೇ ವೇತನ ಆಯೋಗವು ಇಂದು ವರದಿಯನ್ನು ಸಲ್ಲಿಸಿದ್ದು ಮೂಲವೇತನದ ಶೇಕಡ 27.5 ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿದೆ. ವರದಿಯನ್ನು ಪರಿಶೀಲಿಸಿ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಇಂದು ನಿವೃತ್ತ ಕಾರ್ಯದರ್ಶಿ ಮುಖ್ಯ ಕಾರ್ಯದರ್ಶಿ, ಕೆ ಸುಧಾಕರ ರಾವ್ ಅಧ್ಯಕ್ಷತೆಯ ಏಳನೇ ವೇತನ ಆಯೋಗದ ವರದಿ ಸ್ವೀಕರಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದರು.

ವೇತನ ಆಯೋಗದ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲಾಗಿತ್ತು. ಈ ಅವಧಿಯು ಮಾರ್ಚ್ 15ರಂದು ಮುಕ್ತಾಯಗೊಂಡಿದೆ. ನಿನ್ನೆ ನಾನು ಮೈಸೂರಿನಲ್ಲಿದ್ದ ಕಾರಣ ವರದಿ



ಸ್ವೀಕರಿಸಲು ಸಾಧ್ಯವಾಗಿರಲಿಲ್ಲ. ಅದಕ್ಕಾಗಿ ಇಂದು ವರದಿಯನ್ನು ಸ್ವೀಕರಿಸಲಾಗಿದೆ. ವರದಿಯಲ್ಲಿ ಕನಿಷ್ಠ ಮೂಲವೇತನವನ್ನು 17000 ರೂಗಳಿಂದ 27 ಸಾವಿರ ರೂಗಳಿಗೆ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ.

ಇದರೊಂದಿಗೆ ಇನ್ನೂ ಅನೇಕ ಶಿಫಾರಸುಗಳಿದ್ದು ವರದಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗಿದೆ. ಆರ್ಥಿಕ ಇಲಾಖೆಯು ವರದಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ನಂತರ ನೀಡುವ ಸಲಹೆಗಳ ಆಧಾರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಆಯೋಗದ ಸದಸ್ಯರಾದ ಪಿ.ಬಿ. ರಾಮಮೂರ್ತಿ, ಶ್ರೀಕಾಂತ್ ವನಹಳ್ಳಿ , ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕಾ ಡಾ.ಕೆ.ವಿ. ತ್ರಿಲೋಕಚಂದ್ರ, ಹಣಕಾಸು ಇಲಾಖೆ ಕಾರ್ಯದರ್ಶಿ ಡಾ. ಪಿ.ಸಿ. ಜಾಫರ್, ವೇತನ ಆಯೋಗದ ಸದಸ್ಯ ಕಾರ್ಯದರ್ಶಿ ಹೆಪ್ಸಿಬಾರಾಣಿ ಕೊರ್ಲಪಾಟಿ ಉಪಸ್ಥಿತರಿದ್ದರು.

## ಕವಿ ಮನಸು

### ಬಾರಯ್ಯ ಮಳೆರಾಯ



ದಿನ ದಿನದ ದಿನಕರನ ಸಹವಾಸ
ಧರೆಯಾಗಿದೆ ಜಲವಿಲ್ಲದೆ ಉಪವಾಸ
ಎಂದು ಬರುವೆ ಮಳೆರಾಯ ಇಳೆಗೆ
ಹೇಳದಿರು ಪ್ರತೀ ದಿನವೂ ನಾಳೆಗೆ

ಒಡಲೆಲ್ಲ ಬರಿದಾಗಿ ಬೀಡು ಸೆಳೆದಿದೆ
ಹಕ್ಕಿ ಪಕ್ಷಿಗಳೆಲ್ಲ ನಿನ್ನಾಗಮನ ಕಾದಿವೆ
ಬರಿದಾದ ಒಡಲ ತುಂಬಿಸಲು ಬಾರೋ
ಈ ಧರೆಯ ಕರೆಗೆ ಓಗೊಟ್ಟು ಬಾರೋ

ಜಲಚರಗಳೆಲ್ಲ ಅಳಿದುಳಿದ ಅಲ್ಪ
ನೀರಿನಲಿ
ಬೆಂದು ಹೋಗುತಿವೆ ಭಾಸ್ಕರ ಬೇಗೆಯಲ್ಲಿ
ಸಕಲ ಜೀವ ರಾಶಿಗೆ ಜೀವ ಜಲದ
ತತ್ವಾರಾ
ಬಾರಯ್ಯ ಮಳೆರಾಯ ಸುರಿಸುತ್ತ
ಜಲಧಾರ

ಎಲ್ಲರ ಚಿತ್ತ ಮುಗಿಲತ್ತ ನೋಡುತಿದೆ
ಸಣ್ಣ ಕರಿಮೋಡ ಕಂಡರೂ
ಖುಷಿಯಾಗಿದೆ
ಬರುವ ಕರಿಮೋಡ ಪವನ ಪಾಲಾಗುತಿದೆ
ಮಳೆರಾಯ ನೀ ಬರುವ ಭರವಸೆ
ಕಾಣದೇ

ನಿನ್ನತ್ತ ನೋಡುತ್ತಾ ಕಣ್ಣಜಲ ಬತ್ತಿದೆ
ಅತ್ತರೆ ನಯನದಿ ರುಧಿರ
ಬರಬಹುದಾಗಿದೆ
ಪ್ರತೀ ಕ್ಷಣವೂ ನಿನ್ನ ಬರುವಿಕೆಗಾಗಿ
ಕಾದಿದೆ
ಮಳೆರಾಯ ನೀ ಒಮ್ಮೆ ಬಂದು
ಕರುಣಿಸಬಾರದೇ

ಹಳ್ಳ ಕೊಳ್ಳಗಳೆಲ್ಲ ತುಂಬಿ ಹರಿಯಲಿ
ಎಲ್ಲ ಜಲಾಶಯಗಳು ತುಂಬಿ ತುಳುಕಲಿ
ಮಳೆರಾಯ ಇಳೆ ಜೊತೆ ನಿನ್ನ
ಮಿಲನವಾಗಲಿ
ಭೂದೇವಿ ಹಸಿರುಟ್ಟು ನಗು ತುಂಬಿ
ಬರಲಿ

**– ಕೆ ಎಂ ಬಸವರಾಜ**
ನಿವೃತ್ತ ಇಂಜನಿಯರ್ ಹೊಸಪೇಟೆ

### ಚಿತ್ರಕ್ಕೊಂದು ಬರಹ



ದಯೆಯೇ ಧರ್ಮದ ಮೂಲ
ದಯೆ ಇರಲಿ ಸಕಲ ಪ್ರಾಣಿಗಳಲ್ಲಿ
ಎಂದರು ವಿಶ್ವಗುರು ಬಸವಣ್ಣ.

ಭೂಮಿಯ ಮೇಲಿನ ಎಲ್ಲಾ ಜೀವಿಗಳ
ಮೇಲೆ ಪ್ರೀತಿ ಮತ್ತು ದಯೆ ಇರಲಿ
ಎಂದರು ಭಗವಾನ್ ಬುದ್ಧ.

ಧರ್ಮ ಯಾವುದಾದರೆ ಏನು
ಹೇಳುವ ಸಾರವೊಂದೇ
ಅದು ದಯೆ ಅಲ್ಲವೇ?

ಪ್ರೀತಿಯನ್ನು ಹೇಗೆ ಪಡೆಯಲಾದಿತ್ತು
ಕೊಡದಿದ್ದರೆ ನಾವು ಇನ್ನೊಬ್ಬರಿಗೆ
ಹಂಚಿಕೊಳ್ಳಿ ಪ್ರೀತಿ, ಕರುಣೆಯನ್ನು.

ದಯೆಯಿದ್ದರೆ ಧರ್ಮ
ಧರ್ಮವಿದ್ದರೆ ದೇಶ
ಏಕೆಂದರೆ? "ಧರ್ಮೋ ರಕ್ಷತಿ ರಕ್ಷಿತಃ".

**– ಮಂಜುಶ್ರೀ ಮುರಳೀಧರ್**
ತೋರಣಗಲ್ಲು, ಬಳ್ಳಾರಿ

**ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ**
ಡಿ.ವಿ.ಜಿ.

**ದಾಸ ಸಾಹಿತ್ಯದ ಮುಖ್ಯ ತತ್ವ ಭಕ್ತಿ. ಮೂಲ ಸತ್ಯ ಭಗವಂತ. ಇಲ್ಲಿ ಭಗವಂತ ಒಡೆಯ, ಭಕ್ತ ದಾಸ. ದಾಸ ಪರಂಪರೆಯಲ್ಲಿ ಒಡೆಯ ಮತ್ತು ಭಕ್ತರ ಸಂಬಂಧವನ್ನು ಇಲ್ಲಿ ಕಲ್ಪಿಸಲಾಗಿದೆ. ದಾಸರು ಭಕ್ತಿಯ ಮಾರ್ಗದಲ್ಲಿ ಭಗವಂತನನ್ನ ಹುಡುಕಲು ಹೊರಟವರು. ಹಾಡುಗಳ ಮೂಲಕ ಜನತೆಗೆ ಧಾರ್ಮಿಕ ಶಿಕ್ಷಣವನ್ನು ನೀಡಿದವರು ದಾಸರು.**

# ವ್ಯಾಸರಾಯರು-ವ್ಯಾಸರಾಜರಾದ ನೆಲ ಹಂಪಿ

## ಹಂಪಿ ಒಳನೋಟ



ಕನ್ನಡ ಸಾಹಿತ್ಯದಲ್ಲಿ ಹರಿದಾಸ ಸಾಹಿತ್ಯದ ಕೀರ್ತನೆ, ಕಾವ್ಯ, ಸುಳಾಧಿ, ಉಗಾಭೋಗಗಳು ಹರಿದಾಸ ಸಾಹಿತ್ಯವನ್ನು ಶ್ರೀಮಂತ ಗೊಳಿಸಿವೆ. ನೂರಾರು ಹರಿದಾಸರು ಹರಿದಾಸ ಸಾಹಿತ್ಯದ ಶ್ರೀಮಂತಿಗೆ ಕಾರಣಿಭೂತರಾಗಿದ್ದಾರೆ. ಇವರುಗಳಲ್ಲಿ

ಹರಿದಾಸ ಸಾಹಿತ್ಯಕ್ಕೆ ಅಪೂರ್ವ ವಾದ ಕೊಡುಗೆಯನ್ನು ಕೊಟ್ಟು, "ದಾಸಕೂಟದ" ಪರಿಕಲ್ಪನೆಯನ್ನು ಹುಟ್ಟು ಹಾಕಿ ಹಾಗೂ ಅದನ್ನು ಸಂಘಟನೆ ಮಾಡಿ ಸಾಹಿತ್ಯ, ಸಂಗೀತ, ಆಧ್ಯಾತ್ಮದ ಮೂಲಕ ಜನಸಾಮಾನ್ಯರ ಮನೆ ಮನಗಳಿಗೆ ದಾಸಸಾಹಿತ್ಯವನ್ನು ತಲುಪಿಸುವಲ್ಲಿ ಶ್ರೀ ವ್ಯಾಸರಾಯರ ಕೊಡಿಗೆ ಮಹತ್ತರವಾದದ್ದು. 24ಕ್ಕೂಹೆಚ್ಚು ಯತಿಗಳಿಗೆ ವಿದ್ಯಾ ಗುರುಗಳಾಗಿದ್ದವರು ಶ್ರೀ ವ್ಯಾಸರಾಯರು. ವ್ಯಾಸ ಸಾಹಿತ್ಯಕ್ಕೆ, ಹರಿದಾಸ ಸಾಹಿತ್ಯವನ್ನು ಸಮಾನವಾಗಿ ಪರಿಗಣಿಸಿ ಗೌರವಿಸಿದವರು ಶ್ರೀ ವ್ಯಾಸರಾಯರು. ಶ್ರೀಮಧ್ವಾಚಾರ್ಯರು ಹಾಗೂ ಶ್ರೀ ರಾಜೇಂದ್ರ ತೀರ್ಥರ ಪರಂಪರೆಯಲ್ಲಿ ಬೆಳೆದು, ಅಬ್ಬೂರಿನ ಬ್ರಾಹ್ಮಣ್ಯ ತೀರ್ಥರಿಂದ ವ್ಯಸಾಶ್ರಮ ಸ್ವೀಕರಿಸಿ, ಮುಳುಬಾಗಿಲಿನ ಶ್ರೀಪಾದ ರಾಜರಲ್ಲಿ ವಿದ್ಯಾಭ್ಯಾಸ ಮಾಡಿ ಮುಂದೆ ವಿಜಯನಗರ ಸಾಮ್ರಾಜ್ಯಕ್ಕೆ ಬಂದು ನೆಲೆ ನಿಂತು, ಆರು ರಾಜರಿಗೆ ರಾಜಗುರುಗಳಾಗಿದ್ದವರು. ಹೀಗಾಗಿ ಶ್ರೀವ್ಯಾಸರಾಯರು ಶ್ರೀವ್ಯಾಸರಾಜ ರಾಗಿ ಬದಲಾದದ್ದು ಹಂಪಿಯ ನೆಲೆದಲ್ಲಿ ಎನ್ನುವುದು ಅತ್ಯಂತ ರೋಚಕವಾದ ಚರಿತ್ರೆ. ಹಂಪಿಯಲ್ಲಿ ಲೋಕಪಾವನ ಮಠ ಸ್ಥಾಪನೆ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಿ, 50ವರ್ಷಗಳ ಕಾಲ ಅದರ ಕುಲಪತಿಗಳಾಗಿ ಆ ಮೂಲಕ ವಿದ್ಯೆ, ಧಾರ್ಮಿಕ ,ಸಾಂಸ್ಕೃತಿಕ ಕಾರ್ಯಗಳನ್ನು ಪ್ರಸಾರಮಾಡಿದ ಕೀರ್ತಿ ಶ್ರೀವ್ಯಾಸರಾಯರದ್ದು. ಇವರ ಕುರಿತ ಒಂದು ಪರಿಚಾಯಾತ್ಮಕ ಬರಹ ನಿಮಗಾಗಿ.

ದಾಸ ಸಾಹಿತ್ಯದ ಮುಖ್ಯ ತತ್ವ ಭಕ್ತಿ. ಮೂಲ ಸತ್ಯ ಭಗವಂತ. ಇಲ್ಲಿ ಭಗವಂತ ಒಡೆಯ, ಭಕ್ತ ದಾಸ. ದಾಸ ಪರಂಪರೆಯಲ್ಲಿ ಒಡೆಯ ಮತ್ತು ಭಕ್ತರ ಸಂಬಂಧವನ್ನು ಇಲ್ಲಿ ಕಲ್ಪಿಸಲಾಗಿದೆ. ದಾಸರು ಭಕ್ತಿಯ ಮಾರ್ಗದಲ್ಲಿ ಭಗವಂತನನ್ನ ಹುಡುಕಲು ಹೊರಟವರು. ಹಾಡುಗಳ ಮೂಲಕ ಜನತೆಗೆ ಧಾರ್ಮಿಕ ಶಿಕ್ಷಣವನ್ನು ನೀಡಿದವರು ದಾಸರು. ದಾಸರಲ್ಲಿ ಬಹುತೇಕರು ವೈಷ್ಣವ ಪರಂಪರೆಯವರು ಆದರೆ ಮುಂದೆ ಎಲ್ಲರನ್ನು ಒಳಗೊಂಡ ಸಾಹಿತ್ಯ ರಚನೆಯಾಯಿತು. ದಾಸ ಸಾಹಿತ್ಯ ಕ್ರಿ.ಶ. 1324 ರಲ್ಲಿ ಶ್ರೀ ನರಹರಿ ತೀರ್ಥರಿಂದ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತೆ. ಆದರೆ ಅದು ಸ್ಪಷ್ಟ ರೂಪ ಪಡೆದದ್ದು ಶ್ರೀಪಾದರಾಯರು ಮತ್ತು ಶ್ರೀ ವ್ಯಾಸರಾಯರಿಂದ. ಶ್ರೀಪಾದರಾಯರು ತಮಿಳುನಾಡಿನ ಶ್ರೀರಂಗದಲ್ಲಿದ್ದವರು. ಸಂಸ್ಕೃತದ ಮೂಲಕ ದೇವರು, ಧರ್ಮದ ಬಗ್ಗೆ ನಡೆಯುತ್ತಿದ್ದ ಪರಂಪರೆಯನ್ನು ವಚನ ಸಾಹಿತ್ಯದಂತೆ ಅಚ್ಚಗನ್ನಡದಲ್ಲಿ ದಾಸ ಸಾಹಿತ್ಯವನ್ನು ಮೊದಲಿಗೆ ಕನ್ನಡದಲ್ಲಿ ಬೆಳೆಸಿಕೊಂಡು ಬಂದವರು ಶ್ರೀಪಾದರಾಯರು, ಶ್ರೀ ವ್ಯಾಸರಾಯರು ಶ್ರೀ ವಾದಿರಾಜರು ಈ ಮೂವರು ಕನ್ನಡದಲ್ಲಿ ದಾಸ ಸಾಹಿತ್ಯವನ್ನು ರಚನೆ ಮಾಡಿದವರು. ದಾಸ ಸಾಹಿತ್ಯದ ಬೆಳವಣಿಗೆಯಲ್ಲಿ ನೂರಾರು ಜನ ದಾಸರು, ಹರಿದಾಸರು ದಾಸ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸಿದವರು. ವೈಷ್ಣವ ಪರಂಪರೆಯ ಬ್ರಾಹ್ಮಣರು ಪ್ರಾರಂಭಿಸಿದ ಈ ದಾಸ ಸಾಹಿತ್ಯ ನಂತರ ಪುರಂದಾಸರು ಮತ್ತು ಕನಕದಾಸರ ಪ್ರವೇಶದಿಂದ ಜಾತಿ ಮತವನ್ನು ಮೀರಿ ದಾಸ ಸಾಹಿತ್ಯ ಬೆಳೆದು ಬಂದಿರುವುದನ್ನು ನೋಡಬಹುದಾಗಿದೆ.

ದಾಸ ಸಾಹಿತ್ಯಕ್ಕೆ ಶ್ರೀಕಾರ ಹಾಕಿದವರು ಶ್ರೀಪಾದರಾಯರು.ಜನರಲ್ಲಿ ಆತ್ಮವಿಶ್ವಾಸ,ಧರ್ಮ, ಮೌಲ್ಯಗಳ ವಿಚಾರ,ಪ್ರಚಾರ, ದುರಾಸೆ ಮನೋಭಾವದಿಂದ ಜನರನ್ನು ಹೊರೆ ತರುವಂತ ಸಾಮಾಜಿಕ ಕಾಳಜಿಯ ವಿಚಾರಗಳನ್ನು ಹೊಂದಿದ್ದ ಜನರ ಕೂಟವನ್ನು,ವ್ಯಾಸರಾಯರು "ದಾಸಕೂಟ" ಎಂಬ ಹೆಸರಿನಲ್ಲಿ ಪ್ರಾರಂಭಿಸಿದರು.ಈ ದಾಸಕೂಟ ವ್ಯವಸ್ಥೆಗೆ ಭದ್ಧರಾಗಿದ್ದವರನ್ನು ಹರಿದಾಸರೆಂದು ಕರೆಯಲಾಗಿದೆ. ಭಕ್ತ ,ಭಗವಂತನನ್ನು ಸೇರುವ ಹಾದಿಯನ್ನು ಭಕ್ತಿಯ ಮೂಲಕ ಜನರಿಗೆ, ಸಮಾಜದಲ್ಲಿ ಪ್ರಚಾರ ಮಾಡುವುದೇ ಹರಿದಾಸರ ಪ್ರಮುಖ ಉದ್ದೇಶವಾಗಿತ್ತು. ಹೀಗಾಗಿ ಹಂಪಿಯಲ್ಲಿ ದಾಸಕೂಟವನ್ನು ಪ್ರಾರಂಭಿಸಿದವರು ವ್ಯಾಸರಾಯರು. ಅವರು ಹಂಪಿಯಲ್ಲಿದ್ದು ವಿಜಯನಗರ ಸಾಮ್ರಾಜ್ಯದಲ್ಲಿ ಐದು ಜನ ರಾಜರಿಗೆ ರಾಜಗುರುಗಳಾಗಿ ಮಾರ್ಗದರ್ಶನ ಮಾಡಿ ಸಾಮ್ರಾಜ್ಯವನ್ನು, ಸಮಾಜವನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ದವರು. ಬ್ರಾಹ್ಮಣರು ಅದರಲ್ಲಿ ವೈಷ್ಣವರೇ ಪ್ರಮುಖವಾಗಿದ್ದ ದಾಸ ಕೂಟದಲ್ಲಿ , ಪುರಂದಾಸರು ಮತ್ತು ಕನಕದಾಸರಂತ ಶೂದ್ರರಿಗೂ ದೀಕ್ಷೆ ನೀಡಿ ಅವರನ್ನು ಹರಿದಾಸ ಕೂಟಕ್ಕೆ ಸೇರಿಸಿಕೊಂಡಿದ್ದ ಶ್ರೀವ್ಯಾಸರಾಯರದ್ದು ಮಹತ್ವಪೂರ್ಣವಾದ ಚರಿತ್ರೆಯಾಗಿದೆ. ಮುಂದೆ ದಾಸ ಸಾಹಿತ್ಯವೆಂದರೆ, ದಾಸರೆಂದರೆ ಪುರಂದಾಸರು ಮತ್ತು ಕನಕದಾಸರಂದೆ ಇಂದಿಗೂ ಜನಮನ ಗಳಿಸಿದ್ದಾರೆ .ಅಷ್ಟೇ ಅಲ್ಲ ದಾಸರೆಂದರೆ ಪುರಂದರ ದಾಸರಯ್ಯ ಎಂದು ತಮ್ಮ ಗುರುಗಳಾದ ಶ್ರೀವ್ಯಾಸ ರಾಯರಿಂದ ಹೊಗಳಿಸಿಕೊಂಡವರು ಪುರಂದಾಸರು. ಇವರೆಲ್ಲರೂ ಹಂಪಿಯ ನೆಲದಲ್ಲಿ ಇದ್ದು ದಾಸ ಸಾಹಿತ್ಯ ,ಸಂಸ್ಕೃತಿ ,ಪರಂಪರೆಯನ್ನು ಉನ್ನತ ಸ್ಥಾನಕ್ಕೆ ಬೆಳೆಸಿದವರು.

ವಿಜಯನಗರ ಸಾಮ್ರಾಜ್ಯದ ಆರಂಭದ ಸಂಗಮ ವಂಶದ ಅರಸರುಗಳು ವಿರೂಪಾಕ್ಷನನ್ನೆ ರಾಜನನ್ನಾಗಿ, ತಾವು ಅವನ ಪ್ರತಿನಿಧಿ ಎಂದು ವಿರೂಪಾಕ್ಷನ ಹೆಸರಿನಲ್ಲೇ ರಾಜ್ಯಭಾರವನ್ನುಮಾಡುತ್ತಿದ್ದ ಕಾಲಘಟ್ಟದಲ್ಲಿ ಶ್ರೀವ್ಯಾಸರಾಯರ ಪ್ರವೇಶ ವಿಜಯನಗರಕ್ಕೆ ಆಯಿತು.ವಿಜಯನಗರದಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಪ್ರಸಿದ್ದರಾದರು. ಮುಂದೆ ವಿಜಯನಗರದ ಐದಾರು ಜನ ರಾಜರುಗಳಿಗೆ ರಾಜ ಗುರುಗಳಾಗಿದ್ದವರು.ಶ್ರೀ ವ್ಯಾಸರಾಯರು ಹಂಪಿಯಲ್ಲಿ ಲೋಕ ಪಾವನ ಎಂಬ ಮಠವನ್ನು ಸ್ಥಾಪಿಸಿ ಅದರ ಮೂಲಕ ಧಾರ್ಮಿಕ, ಸಾಮಾಜಿಕ,ಶೈಕ್ಷಣಿಕ ,ಸಾಂಸ್ಕೃತಿಕ,ಕಾರ್ಯಕ್ರಮಗಳನ್ನು ನಿರ್ವಹಿಸಿದ್ದು ಅಷ್ಟ ಅಲ್ಲ ಹಂಪಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಅದರ ಕುಲಪತಿಗಳಾಗಿ ದೇಶಾದ್ಯಾಂತ ಇದರ 8 ಕೇಂದ್ರಗಳನ್ನು ಸ್ಥಾಪಿಸಿ, ವಿದ್ಯೆ,ಧಾರ್ಮಿಕ, ಸಾಂಸ್ಕೃತಿಕವಾಗಿ ಪ್ರಚಾರ ಮಾಡಿದವರು. ಹರಿದ್ವಾರ, ಗಯಾ, ಕಾಶಿ,ಬಂಗಾಳ,ಕುಂಭಕೋಣ,ಉಡುಪಿ, ಕಂಚಿ ಹೀಗೆ ಹಲವು ಕಡೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ ಸುಮಾರು 50 ವರ್ಷಗಳ ಕಾಲ ಅದರ ಕುಲಪತಿಗಳಾಗಿ ಧಾರ್ಮಿಕ, ಅಧ್ಯಾತ್ಮಿಕ ,ಸಾಂಸ್ಕೃತಿಕ ಕಾರ್ಯಗಳನ್ನು ನಿರ್ವಹಿಸಿದವರು ಶ್ರೀವ್ಯಾಸರಾಯರು. ಅಂದರೆ ಹಂಪಿಯಲ್ಲಿ ವಿಶ್ವವಿದ್ಯಾಲಯವನ್ನು ಮೊಟ್ಟ ಮೊದಲ ಬಾರಿಗೆ ಸ್ಥಾಪಿಸಿದ ಕೀರ್ತಿ ಶ್ರೀವ್ಯಾಸರಾಜರಿಗೆ ಸಲ್ಲುತ್ತದೆ. ಶ್ರೀ ವಾದಿರಾಜರು ಶ್ರೀ ವಿಜಯೇಂದ್ರ ಶ್ರೀ ಶ್ರೀನಿವಾಸ ತೀರ್ಥರು ಮೊದಲಾದ ಶಿಷ್ಯರ ಜೊತೆ ಸೇರಿ ಮಧ್ವಾಮತವನ್ನು ಅಸೇತು ಹಿಮಾಚಲದ ವರೆಗೆ ಎರಡು ಬಾರಿ ಸಂಚರಿಸಿ ಪ್ರಚಾರವನ್ನು ಮಾಡಿದವರು ಶ್ರೀ ವ್ಯಾಸರಾಯರು.



**ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ**

Scan For Digital Colourful
HAMPI TIMES E-paper

ಕೃಷ್ಣದೇವರಾಯನ ಕಾಲದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದವರು. ಕೃಷ್ಣದೇವರಾಯರಿಗೆ ಒದಗಿದ ಕುಹು ಯೋಗದ ನಿವಾರಣೆಗಾಗಿ ಸ್ವತಃ ಶ್ರೀ ವ್ಯಾಸರಾಯರೇ ಮೂರು ಮುಕ್ಕಾಲುಗಳಿಗೆ ಅಂದರೆ ಒಂದುವರೆ ಗಂಟೆಗಳ ಕಾಲ ವಿಜಯನಗರದ ಸಿಂಹಾಸನವನ್ನೇರಿ ಸಾಮ್ರಾಜ್ಯ ಪರಿಪಾಲಿಸಿ ಕೃಷ್ಣದೇವರಾಯರಿಗೆ ಬಂದ ದುಷ್ಟ ಗ್ರಹಭಾದೆಯನ್ನು ನಿವಾರಿಸಿ ಮರಳಿ ಅವರಿಗೆ ಸಿಂಹಾಸನ ಹಿಂದಿರುಗಿಸಿದರೆಂದು ಹೇಳಲಾಗುತ್ತಿದೆ. ವ್ಯಾಸರಾಯರು ಕುಹೂಯೋಗ ಕಾಲದಲ್ಲಿ ವಿಜಯನಗರ ಸಿಂಹಾಸನ ಅಲಂಕರಿಸಿದ ಕಾರಣ ಶ್ರೀಕೃಷ್ಣದೇವರಾಯರು ರಾಜಸಿಂಹಸನದಲ್ಲಿ ಕುಳ್ಳಿರಿಸಿ ಕನಕಾಭಿಷೇಕವನ್ನು ಮಾಡಿದವರು. ಹೀಗೆ ಶ್ರೀಕೃಷ್ಣದೇವರಾಯ ರಿಂದ ರಾಜ ಸಿಂಹಾಸನದಲ್ಲಿ ಕನಕಾಭಿಷೇಕವನ್ನುಮಾಡಿಸಿಕೊಂಡ ಕಾರಣ ಶ್ರೀವ್ಯಾಸರಾಯರು ,ಶ್ರೀವ್ಯಾಸರಾಜರೆಂದೆ ಕರೆಯಲ್ಪಟ್ಟರು.

1513ರಲ್ಲಿ ವಿಜಯವಿಠಲ ದೇವಾಲಯ ನಿರ್ಮಿಸಿ ಅದರೊಳಗಿನ ವಿಠ್ಠಲ ಮೂರ್ತಿಯನ್ನು ಶ್ರೀ ವ್ಯಾಸರಾಜರಿಂದ ಕೃಷ್ಣದೇವರಾಯ ಪ್ರತಿಷ್ಠಾಪಿಸಿದ. ಮುಂದೆ ಕೃಷ್ಣದೇವರಾಯ ಒರಿಸ್ಸಾ ವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದಾಗ ಉದಯಗಿರಿಯನ್ನು ಗೆದ್ದು ವಿಜಯನಗರಕ್ಕೆ ಬರುವಾಗ ಶ್ರೀ ಕೃಷ್ಣನ ವಿಗ್ರಹವನ್ನು ತಂದು ಅದಕ್ಕೆ ದೇವಾಲಯವನ್ನು ನಿರ್ಮಿಸಿ ಕೃಷ್ಣನ ಮೂರ್ತಿಯನ್ನು ಶ್ರೀ ವ್ಯಾಸರಾಜರಿಂದ ಪ್ರತಿಷ್ಠಾಪಿಸಿದ ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಕೃಷ್ಣದೇವರಾಯನು ವ್ಯಾಸರಾಜರಿಗಾಗಿ ವ್ಯಾಸ ಸಮುದ್ರ ಎಂಬುದನ್ನು ನಿರ್ಮಿಸಿ ಅದರ ನಿರ್ವಹಣೆಗೆ ಬೆಟ್ಟಕೊಂಡ ಎಂಬ ಗ್ರಾಮವನ್ನು ದತ್ತಿಗಾಗಿ ಬಿಟ್ಟು ಕೊಡುತ್ತಾನೆ. ಈ ದತ್ತಿಯನ್ನು ಸ್ವೀಕರಿಸಿದ ವ್ಯಾಸರಾಜರು ಅದನ್ನು 308 ವಿದ್ವಾಂಸರಿಗೆ ಹಂಚಿಕೆ ಮಾಡಿದರು ಎನ್ನಲಾಗಿದೆ. ಕಳಿಂಗ ದೇಶದ ಪ್ರತಾಪ ರುದ್ರ ಗಜಪತಿಯನ್ನು ಯುದ್ಧದಲ್ಲಿ ಸೋಲಿಸಿ ಕೃಷ್ಣದೇವರಾಯ ವಿಜಯಿಯಾದಾಗ ಮದನಪಲ್ಲಿ ಬಳಿ ಇರುವ ಕಂದಕೂರು ಗ್ರಾಮವನ್ನು ವ್ಯಾಸರಾಜರಿಗೆ ದಾನ ಮಾಡಿದ್ದಾನೆ .ಈ ಸ್ಥಳದಲ್ಲಿ ಒಂದು ದೊಡ್ಡ ಕೆರೆಯನ್ನು ವ್ಯಾಸರಾಜರು ನಿರ್ಮಿಸಿದ್ದಾರೆ. ಇದು ವ್ಯಾಸರಘಟ್ಟ ಎಂದೇ ಹೆಸರು ಪಡೆದುಕೊಂಡಿದೆ. ಅದೇ ರೀತಿ ವಿಜಯನಗರದ ಅರಸರ ಸಹಕಾರದಿಂದ ದೊಡ್ಡಬಳ್ಳಾಪುರ ಪ್ರದೇಶದಲ್ಲಿ ಸುಮಾರು 36 ಕೆರೆಗಳನ್ನು ನಿರ್ಮಿಸಿದರು ಎನ್ನಲಾಗಿದೆ . ಹೊಸಪೇಟೆ ಬಳಿಯಲ್ಲಿ ವ್ಯಾಸರಾಜರು ಕೆರೆಯೊಂದನ್ನು ನಿರ್ಮಿಸಿದ್ದಾರೆ. ಅದನ್ನು ಈಗಲೂ ವ್ಯಾಸನಕೆರೆ ಎಂದು ಕರೆಯಲ್ಪಡುತ್ತಿದೆ. ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ ಕಾರ್ಯಗಳನ್ನು ಸಹ ವ್ಯಾಸರಾಜರು ನಿರ್ವಹಿಸಿದ್ದಾರೆ.

ಹಂಪಿಯ ಯಂತ್ರೋಧಾರಕ ಪ್ರಾಣ ದೇವರು ಪ್ರತಿಷ್ಠಾನದ ಗುಡಿಯಿಂದ ಪ್ರಾರಂಭಿಸಿ ರಾಜ್ಯದ ವಿವಿಧ ಕಡೆ ಸುಮಾರು 732 ಸ್ಥಳಗಳಲ್ಲಿ ಹನುಮಂತ ದೇವರ ಪ್ರತಿಷ್ಠಾನ ಮಾಡಿ ಜನರಿಗೆ ಧಾರ್ಮಿಕ ಭಕ್ತಿ ಸೇವೆಗಳಿಗೆ ಅವಕಾಶವನ್ನು ಮಾಡಿಕೊಟ್ಟವರು ಶ್ರೀ ವ್ಯಾಸರಾಯರು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯಲ್ಲಿದ್ದ ವ್ಯಾಸರಾಯರು ದಿನನಿತ್ಯವು ಚಕ್ರತೀರ್ಥದ ಬಳಿ ಇರುವ ಒಂದು ಬಂಡೆಯ ಮೇಲೆ ಕುಳಿತು ಧ್ಯಾನ ಜಪತಪಗಳನ್ನು ಮಾಡಿಕೊಳ್ಳುತ್ತಿದ್ದರು. ಹೀಗೆ ಒಂದು ಸಲ ಧ್ಯಾನಕ್ಕೆ ಕುಳಿತಂತ ಸಂದರ್ಭದಲ್ಲಿ ಮಧ್ವಾಚಾರ್ಯರು ಆಂಜನೇಯ ರೂಪದಲ್ಲಿ ಕಾಣಿಸಿಕೊಂಡು ಅಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸುವಂತೆ ಪ್ರೇರಣೇ ನೀಡಿದವರು. ಅವರು ಆ ಬಂಡೆಯ ಮೇಲೆ ಅಂಗಾರದಿಂದ ಪ್ರಾಣ ದೇವರನ್ನು ಚಿತ್ರಿಸಿ ಧ್ಯಾನದ ಸಂದರ್ಭದಲ್ಲಿ ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರ ವೇಳೆಗೆ ಅಂಗಾರದಲ್ಲಿ ಬರೆದಿದ್ದ ಆಂಜನೇಯ ಮೂರ್ತಿಗೆ ಜೀವ ಬಂದು ಬಂಡೆಯ ಮೇಲಿಂದ ಹಾರಿ ಹೋಗುತ್ತಿತ್ತಂತೆ. ಹೀಗೆ 12 ಸಲ ಈ ಪ್ರಕ್ರಿಯೆ ಪುನರಾವರ್ತಿತವಾದಾಗ ನಂತರ ಅವರು ಷಟ್ ಕೋಣವನ್ನು ಅದರ ಸುತ್ತ ವರ್ತುಲಾಕಾರವಾಗಿ ರಚಿಸಿ ಪದ್ಮದಳದಿಂದ ದಿಗ್ಬಂದನೆ ಮಾಡಿ ಮಧ್ಯದಲ್ಲಿ ಯೋಗ ಆಸನ ರೂಢರಾಗಿರುವಂತೆ, ಜಪಮಾಲೆ ಹಿಡಿದು ಧ್ಯಾನ ಮಗ್ನನಾಗಿರುವಂತೆ ಪ್ರಾಣ ದೇವರನ್ನು ಅದರ ಸುತ್ತಲೂ ಹಾರಿ ಹೋದ 12 ಕೋತಿಗಳಚಿತ್ರವನ್ನು ಒಂದರ ಬಾಲ ಇನ್ನೊಂದಕ್ಕೆ ಹೆಣೆದರು ಯಂತ್ರದಲ್ಲಿ ಪ್ರಾಣದೇವರು ಸನ್ನಿಧಾನವಾಗಿ ನಿಲ್ಲುವಂತೆ ಮಾಡಿದರು. ಅಂದಿನಿಂದ ಯಂತ್ರೋದ್ಧಾರಕ ಆಂಜನೇಯ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಮೂರ್ತಿಯಾಯಿತು. ಈಗಲೂ ಹಂಪಿಯಲ್ಲಿ ಶ್ರೀವ್ಯಾಸರಾಜರು ಪ್ರತಿಷ್ಟಾಪಿಸಲಾಗಿರುವ ಯಂತ್ರೋಧಾರಕ ಪ್ರಾಣದೇವರು ಆಂಜನೇಯನ ಪೂಜೆ ಜಪತಪಗಳು ದಿನವು ನಡೆಯುತ್ತಾ ಬಂದಿರುವುದು ವಿಶೇಷವಾಗಿದೆ.ಜನರು ಅತ್ಯಂತ ಭಕ್ತಿಯಿಂದ ಪ್ರಾಣ ದೇವರನ್ನು ಪೂಜಿಸುತ್ತಾ ಬಂದಿದ್ದಾರೆ.

### ವ್ಯಾಸರಾಜರ ಕೃತಿಗಳು

ಇವರು ಕನ್ನಡದಲ್ಲಿ 164 ಕೀರ್ತನೆಗಳು 13 ಉಗಾ ಭೋಗಗಳು, ಏನು 12 ಸುಳಾದಿಗಳು ಮೊದಲಾದವುಗಳನ್ನು ರಚನೆ ಮಾಡಿದ್ದಾರೆ ಸಂಸ್ಕೃತದಲ್ಲಿ ನ್ಯಾಯಾಮೃತ, ತರ್ಕತಾಂಡವ,ಚಂದ್ರಿಕೆ ಮೊದಲಾದವುಗಳನ್ನು ರಚಿಸಿದ್ದಾರೆ. ತತ್ವಶಾಸ್ತ್ರ ಸಾಹಿತ್ಯ,ದಾಸ ಸಾಹಿತ್ಯ, ಸಂಗೀತಕ್ಕೂ ಅಮೂಲ್ಯವಾದ ಕೊಡುಗೆಯನ್ನು ವ್ಯಾಸರಾಯರು ಕೊಟ್ಟಿದ್ದಾರೆ.ಇವರು ಕೃಷ್ಣ,ಶ್ರೀ ಕೃಷ್ಣ,ಸಿರಿ ಕೃಷ್ಣ ಅಂಕಿತ ಗಳಲ್ಲಿ ಸಾಹಿತ್ಯದ ಇತ್ಯವನ್ನುರಚನೆ ಮಾಡಿದ್ದಾರೆ.

ವ್ಯಾಸರಾಯರು ಮೈಸೂರು ಜಿಲ್ಲೆಯ ಕಾವೇರಿ ತೀರದ ಬನ್ನೂರು ಗ್ರಾಮದಲ್ಲಿ ಕ್ರಿ.ಶ.1447ರ ಏಪ್ರಿಲ್ 22ರಂದು ಜನಿಸಿದವರು. ರಾಮಾಚಾರ್ಯ ಹಾಗೂ ಸೀತಾಬಾಯಿ ಇವರ ತಂದೆತಾಯಿಗಳು. ಮುಂದೆ ಬಾಲಕನಾಗಿದ್ದ ಇವರ ಪ್ರತಿಭೆ ಭಕ್ತಿ ಶ್ರದ್ಧೆಯನ್ನು ಗಮನಿಸಿದ ಅಬ್ಬೂರಿನ ಯತಿಗಳಾಗಿದ್ದ ಬ್ರಾಹ್ಮಣ್ಯತೀರ್ಥರು ಇವರಿಗೆ ವ್ಯಾಸ ತೀರ್ಥರು ಎಂಬ ಅಭಿದಾನದಿಂದ ಸನ್ಯಾಸ ಆಶ್ರಮವನ್ನು ನೀಡಿದವರು ನಂತರ ಅಧ್ಯಯನಕ್ಕಾಗಿ ಮುಳುಬಾಗಿಲಿನ ಶ್ರೀಪಾದರಾಜರಲ್ಲಿಗೆ ಆಗಮಿಸಿ ಸಂಸ್ಕೃತ ಸಾಹಿತ್ಯವನ್ನು ಧಾರ್ಮಿಕ ಆಧ್ಯಾತ್ಮಿಕವನ್ನು ಅಧ್ಯಯನ ಮಾಡಿದರು . ಆಚಾರ್ಯ ಪರಂಪರೆಯಲ್ಲಿ ಬೆಳೆದವರು ಮುಂದೆ ಹರಿದಾಸ ಸಾಹಿತ್ಯವನ್ನು ಪೋಷಿಸಿದವರು ನಂತರ ವಿಜಯನಗರದ ಸಾಮ್ರಾಜ್ಯಕ್ಕೆ ಆಗಮಿಸಿ, ಸಾಳವರು ಹಾಗೂ ತುಳುವ ಅರಸಮನೆತನಗಳ ಆಡಳಿತದಲ್ಲಿ ವಿಜಯನಗರದಲ್ಲಿದ್ದು ಸಾಳವನರಸಿಂಹ ,ವೀರ ನರಸಿಂಹ ,ಕೃಷ್ಣದೇವರಾಯ ಹಾಗೂ ಅಚ್ಯುತದೇವರಾಯ ಅರಸರುಗಳಿಗೆ ವ್ಯಾಸರಾಯರು ರಾಜಗುರುಗಳಾಗಿದ್ದವರು ಮುಂದೆ ತಮ್ಮ ಜೀವಿತಕಾಲವನ್ನು ಹಂಪಿಯಲ್ಲಿ ಪೂರೈಸಿದವರು ವ್ಯಾಸರಾಜರು. ಕ್ರಿಸ್ತ ಶಕ 1539 ರ ವಿಳಂಬಿ ಸಂವತ್ಸರದಲ್ಲಿ ಇವರು ಹಂಪಿ ಆನೆಗುಂದಿ ಮಧ್ಯದ ತುಂಗಭದ್ರ ನಡುಗಡ್ಡಿಯಲ್ಲಿ 92ನೇ ವಯಸ್ಸಿನಲ್ಲಿ ಬೃಂದಾವನಸ್ಥರಾದವರು . ಈ ನಡು ಗಡ್ಡೆಯಲ್ಲಿ. ಶ್ರೀ ಪದ್ಮನಾಮತೀರ್ಥರು, ಶ್ರೀಜಯತೀರ್ಥರು ಶ್ರೀಕವೀಂದ್ರ ತೀರ್ಥರು,ಶ್ರೀವಾಗೀಶ ತೀರ್ಥರು, ಶ್ರೀ ವ್ಯಾಸರಾಜರು ಶ್ರೀ ಶ್ರೀನಿವಾಸ ತೀರ್ಥರು.ಶ್ರೀರಾಮತೀರ್ಥರು ,ಶ್ರೀಸುಧೀಂದ್ರ ತೀರ್ಥರು ಹಾಗೂ ಗೋವಿಂದ ಒಡೆಯರು ತೀರ್ಥರ ಬೃಂದಾವನಗಳಿದ್ದು ಇದನ್ನು ನವ ಬೃಂದಾವನ ಎಂದು ಕರೆಯಲಾಗುತ್ತಿದೆ.ಇಲ್ಲಿ ಪ್ರತಿವರ್ಷ ಆರಾಧನೆಯನ್ನು ನಡೆಸಲಾಗುತ್ತದೆ.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**17-03-2024 – ಭಾನುವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಅಯುಷ್ಮಾನ್ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:34:47 |
| ಸೂರ್ಯಾಸ್ತ | : 18:35:45 |
| ರಾಹು | : 17:06–18:36 |
| ಯಮಘಂಡ | : 11:35–14:05 |
| ಗುಳಿಕ | : 15:36–17:06 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 16-03-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1583.00 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2129 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.087 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1596.95 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9347 ಕ್ಯುಸೆಕ್ |
| ಸಾಮರ್ಥ್ಯ | 17.833 ಟಿಎಂಸಿ |




# ಲೋಕಸಭಾ ಚುನಾವಣೆ ನಿಯಮಪಾಲನೆಗೆ ಅಧಿಕಾರಿ, ಸಿಬ್ಬಂದಿಗೆ ಜಿಲ್ಲಾಧಿಕಾರಿ ಸೂಚನೆ




**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆಯು ಅತ್ಯಂತ ಶಾಂತರೀತಿಯಿಂದ ಮುಕ್ತವಾಗಿ, ನ್ಯಾಯಸಮ್ಮತವಾಗಿ ಹಾಗೂ ನಿಸ್ಪಕ್ಷಪಾತವಾಗಿ ಜರುಗುವ ನಿಟ್ಟಿನಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ತಾಲೂಕು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಶನಿವಾರ ಭಾರತ ಚುನಾವಣಾ ಆಯೋಗವು ಲೋಕಸಭಾ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ ಬಳಿಕ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಸಂವಾದ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಅವರು ಮಾತನಾಡಿದರು.

ಭಾರತ ಚುನಾವಣಾ ಆಯೋಗವು 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಯ ವೇಳಾಪಟ್ಟಿಯನ್ನು ಹೊರಡಿಸಿದ ದಿನಾಂಕದಿಂದಲೇ ಚುನಾವಣಾ ಮಾದರಿ ನೀತಿ ಸಂಹಿತೆಯು ರಾಜ್ಯಾದ್ಯಂತ ಜಾರಿಯಲ್ಲಿರುತ್ತದೆ. ಈ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಕ್ರಿಯಾತ್ಮಕವಾಗಿ ಜಾರಿಯಾಗುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಅತ್ಯಂತ ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಜಿಲ್ಲೆಯಾದ್ಯಂತ ಎಲ್ಲಾ ವರ್ಗಾವಣೆಗಳನ್ನು ನಿಷೇಧಿಸಲಾಗಿದೆ. ಒಂದು ವೇಳೆ ವರ್ಗಾವಣೆಗಳು ಚುನಾವಣಾ ಅಧಿಸೂಚನೆಕ್ಕಿಂತಲೂ ಪೂರ್ವದಲ್ಲಿ ಆಗಿದ್ದಲ್ಲಿ ಅವುಗಳನ್ನು ಈ ಸಂಪೂರ್ಣ ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೆ ಅಮಾನತ್ತಿನಲ್ಲಿರಿಸಲಾಗಿದೆ. ಇಂತಹ ವರ್ಗಾವಣೆಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕು ಎಂದು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲೆಯ, ತಾಲ್ಲೂಕಿನ ಹಾಗೂ ಎಲ್ಲಾ ಇಲಾಖಾ ಹಾಗೂ ಕಚೇರಿ ಮುಖ್ಯಸ್ಥರಿಗೆ ರಜೆ ನೀಡುವುದನ್ನು ನಿರ್ಭಂಧಿಸಲಾಗಿದೆ. ಯಾವುದೇ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದವರು ಜಿಲ್ಲಾಧಿಕಾರಿಗಳ ಪರವಾನಿಗೆ ಇಲ್ಲದೇ ರಜೆ ಪಡೆಯುವುದಾಗಲಿ ಅಥವಾ ಕೇಂದ್ರಸ್ಥಾನ ಬಿಡಬಾರದೆಂದು ಸೂಚನೆ ನೀಡಿದರು.

ವಿಶೇಷವಾಗಿ ಚುನಾವಣಾ ಕಾರ್ಯಕ್ಕೆ ನಿಯುಕ್ತಿಗೊಳಿಸಲಾಗಿರುವಂತಹ ಚುನಾವಣಾಧಿಕಾರಿಗಳು,ಸಹಾಯಕಚುನಾವಣಾಧಿಕಾರಿಗಳು, ಸಹಾಯಕ ಆಯುಕ್ತರು, ತಹಶೀಲ್ದಾರರು ಹಾಗೂ ಇನ್ನಿತರೆ ಚುನಾವಣೆ ಕೆಲಸದಲ್ಲಿ ಕಾರ್ಯನಿರತರಾಗಿರುವಂತಹ ಸಿಬ್ಬಂದಿ ಹಾಗೂ ಅಧಿಕಾರಿ ವರ್ಗದವರು ಚುನಾವಣಾ ಕೆಲಸವನ್ನು ಹೊರತುಪಡಿಸಿ ಬೇರೆಯಾವುದೇ ಕಾರ್ಯಕ್ಕೆ ಕೇಂದ್ರಸ್ಥಾನ ಬಿಡಬಾರದೆಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿನ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಹಾಗೂ ಇನ್ನಿತರೆ ಚುನಾಯಿತ ಸದಸ್ಯ ಮಂಡಳಿ ಸಮಾನ್ಯ ಸಭೆಗಳನ್ನು ಸಂಪೂರ್ಣ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗುವವರೆಗು ನಿಷೇಧಿಸಲಾಗಿದೆ. ಈ ಬಗ್ಗೆ ಗಮನಹರಿಸಬೇಕು ಎಂದು ಸೂಚನೆ ನೀಡಿದರು.

ಈ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಮತದಾರರ ಪ್ರಭಾವಕ್ಕೊಳಪಡುವ ಎಲ್ಲಾ ಸರ್ಕಾರದ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿನ ಭಿತ್ತಿ ಪತ್ರಗಳನ್ನು, ಕಟೌಟ್ಸ್ ಹಾಗೂ ಬ್ಯಾನರ್‌ಗಳನ್ನು ತೆರವುಗೊಳಿಸಲು ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು ಎಂದು ಸೂಚಿಸಿದರು.

ಲೋಕಸಭಾ ಚುನಾವಣೆಯು ಅತ್ಯಂತ ಶಾಂತರೀತಿಯಿಂದ ಮುಕ್ತವಾಗಿ, ನ್ಯಾಯ ಸಮ್ಮತವಾಗಿ ಹಾಗೂ ನಿಸ್ಪಕ್ಷಪಾತವಾಗಿ ಜರುಗುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಚೆಕ್‌ಪೋಸ್ಟ್‌ಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಲು ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಸೇರಿದಂತೆ ಇತರರು ಇದ್ದರು.




# ಆರೋಗ್ಯ ಸೇವೆ ಸಾರ್ವಜನಿಕರಿಗೆ ತಲುಪಲು ಮಾಧ್ಯಮಗಳ ಅಗತ್ಯ

### ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ । ರಾಷ್ಟ್ರೀಯ ಆರೋಗ್ಯ ಉದ್ಘಾಟನ ಕಾರ್ಯಕ್ರಮ




**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಳ್ಳಲಾಗುವ ಕಾರ್ಯಕ್ರಮಗಳು, ಸೌಲಭ್ಯಗಳು ಮತ್ತು ಆರೋಗ್ಯ ಜಾಗೃತಿ ಸಂದೇಶಗಳ ಕುರಿತು ಸಾರ್ವಜನಿಕರಿಗೆ ತಲುಪಿಸಲು ಮಾಧ್ಯಮಗಳ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ನಗರದ ಜಿಲ್ಲಾ ಆಸ್ಪತ್ರೆಯ ಡಿ.ಎನ್.ಬಿ ಹಾಲ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಶನಿವಾರ ಏರ್ಪಡಿಸಿದ್ದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಪರಿಚಯ ಮತ್ತು ಜಾಗೃತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ, ತುರ್ತು ಸಂದರ್ಭಗಳಲ್ಲಿಯೂ ಜಿಲ್ಲಾ ಆರೋಗ್ಯ ಇಲಾಖೆಯು ಉತ್ತಮ ಸೇವೆ ನೀಡುತ್ತಿದೆ. ಲಸಿಕಾ ಕಾರ್ಯಕ್ರಮಗಳೂ ಅತ್ಯುತ್ತಮ ರೀತಿಯಲ್ಲಿ ಒದಗಿಸಲಾಗುತ್ತಿದ್ದು, ಮಾರಕ ರೋಗಗಳನ್ನು ತಡೆಗಟ್ಟಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಹೆರಿಗೆ ಪ್ರಕರಣಗಳು ಜಿಲ್ಲಾ ಆಸ್ಪತ್ರೆ ಮತ್ತು ವಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚು ಆಗುತ್ತಿರುವುದರಿಂದ, ಶಿಶು ಮತ್ತು ತಾಯಿ ಮರಣವನ್ನುನಿಯಂತ್ರಿಸಲುಸಹಕಾರಿಯಾಗುತ್ತಿದೆ ಎಂದು ತಿಳಿಸಿದರು.

ಕಡುಬಡವರಿಗೆ ಗುಣ ಮಟ್ಟದ ಆರೋಗ್ಯ ಸೇವೆಗಳನ್ನು ಸ್ಥಳೀಯವಾಗಿ ದೊರಕಿಸಿ ಹೆಚ್ಚಿನ ಚಿಕಿತ್ಸೆಗೆ ದೂರದೂರಿಗೆ ರೋಗಿಗಳನ್ನು ಕಳುಹಿಸುವುದನ್ನು ತಪ್ಪಿಸಲು ಇತ್ತೀಚೆಗೆ ಜಿಲ್ಲಾ ಆಸ್ಪತ್ರೆಯಲ್ಲಿಟೆಲಿಐಸಿಯುಹಬ್‌ಆರಂಭಿಸಲಾಗಿದೆ ಎಂದು ತಿಳಿಸಿದ ಅವರು, ಜಿಲ್ಲೆಯಲ್ಲಿ ಯಾವುದೇ ಆರೋಗ್ಯ ಸೇವೆಗಳು, ಸೌಲಭ್ಯಗಳು ಹಾಗೂ ಇತರೆ ಕುಂದು ಕೊರತೆಗಳು ಕಂಡು ಬಂದಲ್ಲಿ ಸಂಬಂಧಿಸಿದ ವಿಭಾಗದ ಅಧಿಕಾರಿಗಳಿಗೆ ಸಂಪರ್ಕಿಸಬಹುದು ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಸಲಹೆ ಮಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲಾ ಆಸ್ಪತ್ರೆಯಲ್ಲಿ ಒಟ್ಟು 27 ಆರೋಗ್ಯ ಕಾರ್ಯಕ್ರಮಗಳ ವಿಭಾಗಗಳಿವೆ. ಒಂದೊಂದು ಕಾರ್ಯಕ್ರಮ ಕುರಿತು ವಿಶೇಷ ವರದಿ ಮಾಡಲು ಅಗತ್ಯ ಮಾಹಿತಿ ಒದಗಿಸಲಾಗುವುದು. ವರದಿಯು ಸಕಾರಾತ್ಮಕವಾಗಿರಲಿ ಅಥವಾ ನಕಾರಾತ್ಮಕವಾಗಿರಲಿ ಅವುಗಳನ್ನು ಪರಿಗಣಿಸಿ, ಇನ್ನಷ್ಟು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳ ಕುರಿತು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುವುದು ಎಂದರು.

ಜಿಲ್ಲೆ ಆಸ್ಪತ್ರೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಆರೋಗ್ಯ ಸೇವೆಗಳು ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ಮಾಧ್ಯಮ ಪ್ರತಿನಿಧಿಗಳು ಹೆಚ್ಚಿನ ರೀತಿಯಲ್ಲಿ ಪ್ರಚಾರ ನೀಡಬೇಕು ಎಂದು ಕೋರಿದರು.

ತಾಯಿ-ಶಿಶು ಮರಣ ತಪ್ಪಿಸಲು ಗಂಡಾಂತರ ಗರ್ಭಿಣಿಯರ ನಿಗಾವಹಿಸಲು ಗ್ರಾಮ ಮಟ್ಟದಲ್ಲಿಯೂ ವೈದ್ಯರನ್ನೊಳಗೊಂಡಂತೆ ಮೊಬೈಲ್ ಮೂಲಕ ವ್ಯಾಟ್ಸ್‌ಆಪ್ ಗ್ರೂಪ್ ರಚಿಸಲಾಗಿದೆ. ಈ ಮೂಲಕ ಆಯಾ ಗ್ರಾಮಗಳ ಗರ್ಭಿಣಿಯರ ಸ್ಥಿತಿ-ಗತಿ ಚಲನ-ವಲನಗಳ ಬಗ್ಗೆ ಕಾಳಜಿ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನೊಳಗೊಂಡಂತಹ ಕಿರುಹೊತ್ತಿಗೆ ಮತ್ತು ವಿಶ್ವ ಗ್ಲಾಕೋಮಾ ಸಪ್ತಾಹ ಭಿತ್ತಿಪತ್ರ ಬಿಡುಗಡೆಗೊಳಿಸಿದರು.

ಕಾರ್ಯಾಗಾರದಲ್ಲಿ ಗ್ಲಾಕೋಮಾ, ಮಾನಸಿಕ ಆರೋಗ್ಯ, ಕ್ಷಯರೋಗ ನಿರ್ಮೂಲನೆ, ಹೆಚ್‌ಐವಿ ಸೇರಿದಂತೆ ಇತರೆ ಕಾರ್ಯಕ್ರಮಗಳ ಕುರಿತು ಸಂಬಂಧಿಸಿದ ವೈದ್ಯಾಧಿಕಾರಿಗಳು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರ ಕುಮಾರ್, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್, ಜಿಲ್ಲಾ ಆಸ್ಪತ್ರೆಯ ಶುಶ್ರುಷಣಾಧಿಕಾರಿ ಡಾ.ವಿಮಲಾಕ್ಷಿ ಸೇರಿದಂತೆ ಮಾಧ್ಯಮ ಪ್ರತಿನಿಧಿಗಳು, ಜಿಲ್ಲಾ ಆಸ್ಪತ್ರೆಯ ವೈದ್ಯರು, ಸಿಬ್ಬಂದಿಗಳು, ಇನ್ನಿತರರು ಉಪಸ್ಥಿತರಿದ್ದರು.

# ಮೀನುಗಾರಿಕೆ ಇಲಾಖೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆ ವತಿಯಿಂದ ಕರ್ನಾಟಕ ಗಣಿ ಪುನಶ್ಚೇತನ ನಿಗಮದಡಿ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಮೀನುಗಾರರ ಸಹಕಾರ ಸಂಘಗಳು, ಮೀನುಗಾರರ ರೈತ ಉತ್ಪಾದಕ ಸಂಸ್ಥೆಗಳು, ಮೀನುಗಾರರು, ಮೀನು ಕೃಷಿಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಅರ್ಜಿಗಳನ್ನು ಮಾ.31ರ ಒಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ಮೊ.9449593156ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಗುವಿನ ಪೋಷಕರ ಪತ್ತೆಗೆ ಮನವಿ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರಂ ಒಂದರ 07388 ಸಂಖ್ಯೆಯ ರೈಲಿನ ಭೊಗಿಯಲ್ಲಿ ಮಾ.01 ರಂದು 3 ವರ್ಷದ ಗಂಡು ಮಗು ದೊರೆತ್ತಿದ್ದು, ಪೋಷಕರ ಪತ್ತೆಗಾಗಿ ರೈಲ್ವೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಮಗುವಿನ ಚಹರೆ: ದುಂಡು ಮುಖ, ಬಿಳಿ ಬಣ್ಣ ಹೊಂದಿದ್ದು, ರೈಲುಗಾಡಿ ಸಂಖ್ಯೆ 07338 ಗುಂತಕಲ್-ಹುಬ್ಬಳ್ಳಿ ಪ್ಯಾಸೆಂಜರ್ ರೈಲುಗಾಡಿಯ ಹಿಂದಿನ ಜನರಲ್ ಬೋಗಿಯಲ್ಲಿ ಬಳ್ಳಾರಿ ರೈಲ್ವೆ ನಿಲ್ದಾಣದ ವೇದಿಕೆ ನಂ.01 ರಲ್ಲಿ ನಿಂತಾಗ ಮಗು ಸಿಕ್ಕಿರುತ್ತದೆ.

ಈ ಮೇಲ್ಕಂಡ ಮಾಹಿತಿ ಅನ್ವಯ ಮಗುವಿನ ಪೋಷಕರ ಸುಳಿವು ಸಿಕ್ಕಲ್ಲಿ, ಬಳ್ಳಾರಿ ರೈಲ್ವೆ ಪಿ.ಎಸ್ ದೂ:0839227606, ಮೊ:948080231, ಇ ಮೇಲ್ bellaryrly@ksp.gov.in ಗೆ ಅಥವಾ ಬೆಂಗಳೂರು ರೈಲ್ವೆ ಕಂಟ್ರೋಲ್ ರೂಂ ಇ ಮೇಲ್ dcrly@ksp.gov.in ಇವರಿಗೆ ಸಂಪರ್ಕಿಸಿ ಮಾಹಿತಿ ನೀಡಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರಿಗಾಗಿ ಅಣಜಿಗೆರೆ ಗ್ರಾಮ ಪಂಚಾಯಿತಿಗೆ ಮುತ್ತಿಗೆ




**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಅಣಜಿಗೆರೆ ಗ್ರಾಮದ ಕ್ಯಾಂಪ್‌ನಲ್ಲಿ ಬಹಳ ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಕಿಸಾನ್ ಸಭಾ ವತಿಯಿಂದ ನೀರಿಗಾಗಿ ಪ್ರತಿಭಟನೆ ನಡೆಸಿದರು.

ಕೆರೆಗುಡಿಹಳ್ಳಿ ಹಾಲೇಶ್ ಮಾತನಾಡಿ, ಈ ಭಾಗದಲ್ಲಿ ಐದಾರು ತಿಂಗಳಿನಿಂದ ಕುಡಿಯುವ ನೀರಿನ ಸಮಸ್ಯೆಯಿದೆ, ಜಿಲ್ಲಾಧಿಕಾರಿಗಳ ನೀರಿನ ಸಮಸ್ಯೆಗೆ ಸ್ಪಂದಿಸಬೇಕೆಂಬ ಆದೇಶವಿದ್ದರೂ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ.ಸಮಸ್ಯೆ ಬಗೆಹರಿಯದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮನವಿ ಸ್ವೀಕರಿಸಿ ಪಿಡಿಓ ಉಮೇಶ್ ಮಾತನಾಡಿ, ಟ್ಯಾಂಕರ್ ಮೂಲಕ ನೀರು ಒದಗಿಸಲಾಗುವುದು, ಕುಡಿಯುವ ನೀರಿಗಾಗಿ ಟೆಂಡರ್ ಕರೆದಿದ್ದೇವೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹೆಚ್. ಎಮ್. ಸಂತೋಷ್, ಹರಿಯಮ್ಮನಹಳ್ಳಿ ಬಸವರಾಜ್, ಭಾಷ,ವಿಶಾಲಮ್ಮ, ಮಹಿಳೆಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಅನಂತ್ ಕುಮಾರ್ ಹೆಗಡೆ ಮಾಧ್ಯಮಗಳ ಕ್ಷಮೆಯಾಚಿಸಲಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಉತ್ತರ ಕನ್ನಡ ಲೋಕಸಭಾ ಸದಸ್ಯ ಅನಂತ್‌ಕುಮಾರ್ ಹೆಗಡೆ ಮಾಧ್ಯಮದವರನ್ನು ಕೀಳಾಗಿ ಕಂಡಿರುವ ಕಾರಣ ಕೂಡಲೆ ಅವರು, ಮಾಧ್ಯಮಗಳ ಕ್ಷಮೆಯಾಚಿಸಬೇಕು ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕ ಪದಾಧಿಕಾರಿಗಳು ತಹಸೀಲ್ದಾರ್‌ಗೆ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧಕ್ಕೆ ತೆರಳಿದ ಪದಾಧಿಕಾರಿಗಳು, ಮನವಿ ಪತ್ರವನ್ನು ತಹಸೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿಯವರಿಗೆ ಸಲ್ಲಿಸಿದ ಬಳಿಕ ಸಂಘದ ತಾಲೂಕು ಅಧ್ಯಕ್ಷ ಉಮಾಪತಿ ಶೆಟ್ಟರ್ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹಿಲ್ಲೂರು ಗ್ರಾಮದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿ, ಆನೆ ಹೋಗುತ್ತಿರುತ್ತೆ ನಾಯಿಗಳು ಬೊಗಳುತ್ತಾವೆ, ಅದು ಸಹಜ ಎಂದು ಮಾಧ್ಯಮಗಳನ್ನು ನಿರ್ಲಕ್ಷ್ಯತನದಿಂದ ಮಾತನಾಡಿ ಹಿಯಾಳಿಸಿರುವುದನ್ನು ನಾವು ಖಂಡಿಸುತ್ತೇವೆ. ಕೂಡಲೆ ಅವರು ಮಾಧ್ಯಮಗಳ ಕ್ಷಮೆಯಾಚಿಸಬೇಕು ಎಂದರು.

ರಾಜಕೀಯದವರು ತಾವು ಸಮಾಜಮುಖಿಯಾಗಲು ತಮಗೆ ಬೇಕಾದಾಗ ಮಾಧ್ಯಮಗಳನ್ನು ಬಳಸಿಕೊಂಡು, ನಂತರ ಮಾಧ್ಯಮಗಳನ್ನೇ ಈ ರೀತಿ ಅವಮಾನಿಸುವುದು ಸರಿಯಾದ ನಡವಳಿಕೆ ಅಲ್ಲ. ಬಿಜೆಪಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹೆಗಡೆಯವರಿಗೆ ಬುದ್ಧಿಮಾತುಗಳನ್ನು ಹೇಳಬೇಕು.

ಮನವಿಪತ್ರ ಸ್ವೀಕರಿಸಿದ ತಹಸೀಲ್ದಾರ್ ಈ ವಿಷಯ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಈ ವೇಳೆ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಬುಡ್ಡಿ ಬಸವರಾಜ್, ತಾಲೂಕು ಉಪಾಧ್ಯಕ್ಷ ಉಪ್ಪಾರ್ ಅಶೋಕ, ಕಾರ್ಯದರ್ಶಿ ರಾಜಾವಲಿ, ಸದಸ್ಯರಾದ ಜೆ.ನಾಗರಾಜ್, ವಿಶ್ವನಾಥ ಬಾವಿಕಟ್ಟಿ, ಸಿ.ಶಿವಾನಂದ, ಅಕ್ಕಂಡಿ ಬಸವರಾಜ್, ಬಿ.ಕೆ.ಬಸವರಾಜ್, ಸ್ಥಳೀಯ ನ್ಯೂಸ್ ಚಾನಾಲ್‌ನ ಅಬ್ದುಲ್ ಗಫೂರ್ ಖಾನ್ ಇತರರಿದ್ದರು.

# ದೇವಸ್ಥಾನ, ಮಠ, ಸಂಸ್ಥೆಯಲ್ಲಿ ರಾಜಕೀಯ ಚಟುವಟಿಕೆ ನಿರ್ಬಂಧ

**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ಅಂಗವಾಗಿ ಶಾಂತಿಯುತ ಹಾಗೂ ಮುಕ್ತ ರೀತಿಯಾಗಿ ನಡೆಸುವ ನಿಟ್ಟಿನಲ್ಲಿ ಜಿಲ್ಲೆಯ ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿ ಇಲಾಖೆಗೆ ಒಳಪಡುವ ಎಲ್ಲಾ ದೇವಸ್ಥಾನ, ಮಠ, ಧಾರ್ಮಿಕ ಸಂಸ್ಥೆಗಳು ಹಾಗೂ ಧಾರ್ಮಿಕ ಸ್ಥಳಗಲ್ಲಿ ರಾಜಕೀಯ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ ಎಂದು ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿ ಇಲಾಖೆಯ ಸಹಾಯಕ ಆಯುಕ್ತರಾದ ಹೆಚ್. ಗಂಗಾಧರ್ ಅವರು ತಿಳಿಸಿದ್ದಾರೆ.

ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನ, ಮಠ, ಮಂದಿರ, ಜೈನ್ ಬಸದಿಗಳು ಹಾಗೂ ಇವುಗಳ ವ್ಯಾಪ್ತಿಗೆ ಒಳಪಡುವ ಭವನ, ಯಾತ್ರಿ ನಿವಾಸ ಪ್ರದೇಶ, ಕಲ್ಯಾಣ ಮಂಟಪಗಳಲ್ಲಿ ಸಭೆ, ಸಮಾರಂಭ ಅಥವಾ ಇನ್ನಿತರೆ ರಾಜಕೀಯ ಚಟುವಟಿಕೆಗಳ ಆಯೋಜನೆಗೆ ಅನುಮತಿ ಇರುವುದಿಲ್ಲ.

**ನಿಬಂಧನೆಗಳು:** ರಾಜಕೀಯ ಚಟುವಟಿಕೆಗಳಿಗೆ ದೇವಸ್ಥಾನದ ಕೊಠಡಿಗಳು, ಕಲ್ಯಾಣ ಮಂಟಪ, ಸಮುದಾಯದ ಭವನ, ಖಾಲಿ ಜಾಗ, ದೇವಸ್ಥಾನದ ಆವರಣ, ಇತರೆ ಧಾರ್ಮಿಕ ಸ್ಥಳಗಳನ್ನು ನೀಡಲು ಅವಕಾಶ ಇರುವುದಿಲ್ಲ. ದೇವಸ್ಥಾನಗಳಲ್ಲಿ ವ್ಯಕ್ತಿಗಳು ಯಾವುದೇ ಸಮಾರಂಭ, ಸಭೆ, ಇನ್ನಿತರೆ ರಾಜಕೀಯ ಚಟುವಟಿಕೆಗಳು ನಡೆಸುವಂತಿಲ್ಲ.

ದೇವಸ್ಥಾನ ಆವರಣದಲ್ಲಿ ರಾಜಕೀಯ ವ್ಯಕ್ತಿಗಳಿಂದ ಅನವಶ್ಯಕ ಕಾರ್ಯಕ್ರಮದ ಆಯೋಜನೆಯಲ್ಲಿ ಊಟದ ವ್ಯವಸ್ಥೆ ಮಾಡುವಂತಿಲ್ಲ. ದೇವಸ್ಥಾನ ಧ್ವನಿ ವರ್ಧಕಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸುವಂತಿಲ್ಲ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA